ದೇವದಾಸಿ :

ಮೂಲತಹಃ ದೇವದಾಸಿಯ ಪಾತ್ರವು ರೇಣುಕಾ ಎಲ್ಲಮ್ಮದೇವಿಗೆ ಅರ್ಪಣೆಯಾದ ನಂತರ ದೇವಸ್ಥಾನದಲ್ಲಿ ದೈನಂದಿನ ಪೂಜೆ ಮತ್ತು ಪ್ರಾರ್ಥನೆಯ ಸಂದರ್ಭದಲ್ಲಿ ಸೇವಕಿ ಆಗಿ ಕೆಲಸ ಮಾಡುವದಾಗಿದೆ. ಸಾಂಪ್ರದಾಯಿಕವಾಗಿ ದೇವದಾಸಿಯು ದೇವಸ್ಥಾನದ ಪ್ರಾಂಗಣದಲ್ಲಿ ವಾಸವಾಗಿದ್ದು, ಪೂಜಾ ವಿಧಿ - ವಿಧಾನಗಳಲ್ಲಿ ಮತ್ತು ಉತ್ಸವಗಳಲ್ಲಿ ಭಾಗವಹಿಸುವದಾಗಿತ್ತು. ದೇವದಾಸಿಯರು ದೇವಸ್ಥಾನದ ಅದರ ಆರ್ಥಿಕ ಮತ್ತು ಆಡಳಿತದ ಅವಿಭಾಜ್ಯ ಅಂಗವಾಗಿದ್ದು, ಪೂಜಾರಿಗಳು ಅಥವಾ ಸ್ಥಾನಿಕರು ಅವರಿಂದ ಅವರ ಮಕ್ಕಳ ಒಡಗೊಂಡು ಹಣ ಮತ್ತು ಕಾಣಿಕೆಗಳನ್ನು ಪಡೆದುಕೊಳ್ಳುತ್ತಿದ್ದರು. ಎಲಮ್ಮ ದೇವಿಯ ದೇವಸ್ಥಾನವು ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿದ್ದುದರಿಂದ ಅಲ್ಲಿ ಸಾವಿರಾರು ಹುಡಿಗೆಯರನ್ನು ದೇವದಾಸಿಯರಾಗಿ ಅರ್ಪಣೆಗೊಳ್ಳುತ್ತಿದ್ದುದರಿಂದ ಕೆಲವು ಜನ ಹಿರಿಯ ದೇವದಾಸಿಯರು ಪ್ರಾಂಗಣದಲ್ಲಿಯೇ ವಾಸವಾಗಿದ್ದು, ಅಲ್ಲಿಯೇ ಒಂದು ಹೋಗುವ ಭಕ್ತಾದಿಗಳಿಗೆ ಹೂ-ಕಾಯಿ ಕುಂಕುಮ, ಬಳೆ ಮುಂತಾದವುಗಳನ್ನು ಮಾರಾಟ ಮಾಡುವ ಮತ್ತು ನೇರವಾಗಿ ತಾನಿಕರ ಆದೇಶದಂತೆ ನಡೆದುಕೊಳ್ಳುತ್ತಿದ್ದರು ಹಾಗೂ ತರುಣಿಯರೂ ಹೂ-ಕಾಯಿ ಇತರ ಪರಕೆಯ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ದೇವಸ್ಥಾನದ ಸೇವೆಯು ಸಾಂಪ್ರದಾಯಿಕವಾಗಿ ಋತುಮತಿಯಾಗದ ಹೆಣ್ಣು ಮಕ್ಕಳಿಗೆ ಮತ್ತು ಮುಟ್ಟು ನಿಂತ ಹಿರಿಯ ಜೋಗತಿಯರಿಗೆ ಮಾತ್ರ ಸೀಮಿತವಾಗಿತ್ತು. ಲೈಂಗಿಕ ಚಟುವಟಿಕೆಯುಳ್ಳ ಅವಧಿಯಲ್ಲಿ ದೇವದಾಸಿಯರು ಪವಿತ್ರ ದೇವಸ್ಥಾನದ ಪರಿಸರದಿಂದ ದೂರವಿದ್ದು ದೇವತೆಯ ಸೇವೆಯಾಗಿ ಪುರುಷರೊಡನೆ ಲೈಂಗಿಕ ಸಂಬಂಧವನ್ನು ಹೊಂದಿರುತ್ತಿದ್ದರು. ಇದರಿಂದ ಬೆಳಗಾವಿ ಜಿಲ್ಲೆಯ ದೇವದಾಸಿಯರು ಸಮೀಪದ ನಗರ ಪಟ್ಟಣಗಳಲ್ಲಿನ ಲೈಂಗಿಕ ವ್ಯಾಪಾರದ ಸಂಪರ್ಕ ಹೊಂದಿದ್ದರು. ಆದಾಗ್ಯೂ ದೇವದಾಸಿಯರು ಸಾಮಾನ್ಯ ವೈಶ್ಯೆಯರಂತಿರಲಿಲ್ಲ. ಅವಳು ಲೈಂಗಿಕ ಕಾರ್ಯಕ್ಕೆ ಯಾವುದೇ ಶುಲ್ಕವನ್ನು ಪಡೆಯದೇ ಅದರ ಬದಲು ಕಾಣಿಕೆಗಳನ್ನು ಪಡೆದುಕೊಳ್ಳುತ್ತಿದ್ದರು. [10] ಈ ತರಹದ ಜೀವನ ಮುಗಿದ ನಂತರ ಅವಳು ಮನೆಗೆ ಹಿಂತಿರುಗಿ ಯಾರಾದರೊಬ್ಬರು ಸಂಗಾತಿಯೊಡನೆ ಸಾಮಾನ್ಯ ಬದುಕು ನಡೆಸುತ್ತಿದ್ದರು. ಸಾಂಪ್ರದಾಯಿಕವಾಗಿ ಅವರು ಐದು ಮನೆಗಳಲ್ಲಿ ಭಿಕ್ಷೆ ಬೇಡುತ್ತಿದ್ದರು. ಆದರೆ ಅದೀಗ ಬಹುತೇಕವಾಗಿ ತಿರಸ್ಕರಿಸಲಾಗಿದೆ.

ಜೋಗಿನಿ

ಈ ಪದ್ಧತಿಯ ಆಚರಣೆಯು ದೊಡ್ಡದಾದ ಹಾಗೂ ಯಾವುದೇ ನಿರ್ದಿಷ್ಟ ದೇವಸ್ಥಾನದ ಮೇಲೆ ಮತ್ತು ಅದರ ವ್ಯಾಪಾರಿ ಜೀವನದ ಮೇಲೆಯಾಗಲಿ ಕೇಂದ್ರೀಕೃತವಾಗಿಲ್ಲ ಹಾಗೂ ಇದು ಕಡಿಮೆ ಲೈಂಗಿಕ ವ್ಯಾಪಾರಕ್ಕೆ ಸಂಬಂಧಿಸಲಾಗಿದೆ. ಜೋಗಿನಿಯರನ್ನು ಧಾರ್ಮಿಕ ಹಬ್ಬ-ಸಮಾರಂಭಗಳಲ್ಲಿ ಬಳಸಿಕೊಳ್ಳುವ ನಿದರ್ಶನಗಳೇ ಹೆಚ್ಚಾಗಿ ಕಂಡು ಬರುತ್ತವೆ. [11] ಋತುಮತಿಯಾದ ನಂತರ ಗ್ರಾಮದೇವತೆ ದೇವಸ್ಥಾನದಲ್ಲಿ ಇಲ್ಲವೆ ತಂದೆ-ತಾಯಿಗಳ ಮನೆಯಲ್ಲಿ ಜೋಗಿನಿಯ ಮದುವೆ ಸಾಮಾನ್ಯವಾಗಿ ಜರುಗುತ್ತದೆ. ಬಹುತೇಕವಾಗಿ ಸೋದರಮಾವನೇ ಗಂಡನ ಸ್ಥಾನದಲ್ಲಿದ್ದು ಅವಳ ಕನ್ಯತ್ವವನ್ನು ಮುರಿಯುತ್ತಾನೆ. ಜೋಗಿನಿ ಅವನೊಡನೆ ಇಟ್ಟುಕೊಂಡವಳಾಗಿ ಇರಬಹುದು. ಅಥವಾ ಆತನೇ ತನಗಿಷ್ಟ ಬಂದಾಗ ಇವಳನ್ನು ತ್ಯಜಿಸಬಹುದು. ಗಂಡ ಅವಳ ಜವಾಬ್ದಾರಿಯನ್ನು ತೆಗೆದುಕೊಳ್ಳದೇ ಹೋಗುವದರಿಂದ ಜೋಗಿನಿಯು ತಂದೆ - ತಾಯಿಗಳ ಮನೆಯಲ್ಲಿಯೇ ಇರಬೇಕಾಗುವದು. ಇನ್ನು ಕೆಲವು ಪ್ರಕರಣಗಳಲ್ಲಿ ಜೋಗಿನಿಯನ್ನು ಅವಳ ಸಂಬಂಧಿಕರಿಗೆ ತಾತ್ಪೂರ್ತಿಕವಾಗಿ ಇಟ್ಟುಕೊಳ್ಳಲು ಅಥವಾ ಎರಡನೇ ಹೆಂಡತಿಯನ್ನಾಗಿ ಕೊಡಲಾಗುವದು ಆದರಿಂದ ಅವಳು ಬೇರೆಯವರೊಡನೆ ಲೈಂಗಿಕ ಸಂಬಂಧವನ್ನು ಹೊಂದಬೇಕಿಲ್ಲ. ಬೇರೆಲ್ಲ ಪ್ರಕರಣಗಳಲ್ಲಿ ಅವಳು ಸಾಮಾನ್ಯವಾಗಿ ಸಾಮಾಜಿಕ ಸೊತ್ತಾಗಿ ಅಪೇಕ್ಷೆ ಪಟ್ಟವರಿಗೆ ಲೈಂಗಿಕ ಸೇವೆಯನ್ನು ನೀಡಬೇಕಾಗುವದು. ಈ ದೃಷ್ಟಿಯಿಂದ ಜೋಗಿನಿಯು ಲೈಂಗಿಕ ಗುಲಾಮಳಾಗಿದ್ದು ಸಮಾಜದ ಯಾವುದೇ ಪುರುಷರಿಗೆ ಅವಳು ಲಭ್ಯಳಾಗಬೇಕಾಗುವದು ಜೋಗಿನಿಯು ತನ್ನ ಲೈಂಗಿಕ ಸೇವೆಗೆ ಯಾವುದೇ ಸಂಭಾವನೆ ಪಡೆಯದೆ ಕಾಣಿಕೆಗಳನ್ನು ಮಾತ್ರ ಸ್ವೀಕರಿಸಬಹುದು. ಜೋಗಿನಿಯರು ತಮ್ಮ ಸ್ಥಾನ ಬಲದಿಂದ ಯಾವುದೇ ಆರ್ಥಿಕ ಲಾಭವನ್ನು ಪಡೆದುಕೊಳ್ಳುವಂತಿಲ್ಲ, ಆದರೆ ಅವರು ಭಿಕ್ಷೆ ಬೇಡುವ ಹಕ್ಕುಳ್ಳವರಾಗಿರುತ್ತಾರೆ. ಹಾಗೆ ಭಿಕ್ಷೆಯ ಮೇಲೆ ಬದುಕುತ್ತಾರೆ. ಅವಳು ಯಾವುದೇ ವ್ಯಕ್ತಿಯ ಜೊತೆಗಿದ್ದರೂ ಅವನ ಸಂಬಂಧದಿಂದ ಜನಿಸಿದ ಮಗುವಿಗೆ ಆತ ತಂದೆಯ ವಾರಸ್ಸನ್ನು ನೀಡಬೇಕಿಲ್ಲ.

ಮಾತಮ್ಮ :

ಆಂಧ್ರಪ್ರದೇಶದ ಚಿತ್ತೂರು ಮತ್ತು ನೆಲ್ಲೂರ ಜಿಲ್ಲೆಗಳಲ್ಲಿ ಗ್ರಾಮದೇವತೆಗೆ ಅರ್ಪಿಸಲಾದ ಹುಡಿಗೆಯರಿಗೆ ಮಾತಮ್ಮ ಎಂದು ಕರೆಯುತ್ತಾರೆ. ಇದು ರೇಣುಕಾದೇವಿಯ ಪುನರಾವತಾಗವೆಂದೂ ಅವಳೇ ಮಾದಿಗ ಸಮಾಜದ ಜನರಿಗೆ ಹೇಳಿದೇನೆಂದರೆ ತಾನು ಅವರು ನಿರ್ದಿಷ್ಟ ದೇವತೆಯಾಗಿ ಪುನಃ ಜನ್ಮ ವೃತ್ತಿ ಬರುತ್ತೇನೆಂಬುದಾಗಿ ನಂಬುತ್ತಾರೆ.[12] ಆಂಧ್ರಪ್ರದೇಶದಲ್ಲಿ ಮಾದಿಗ ಸಮುದಾಯವು ಒಂದು ಪ್ರಮುಖ ದಲಿತ ಸಮುದಾಯವಾಗಿದೆ. ಇನ್ನೊಂದು ದಲಿತ ಸಮುದಾಯವಾದ 'ಮಾಲಾ' ಇದು ಮಾತಮ್ಮ ಸಂಪ್ರದಾಯಕ್ಕೆ ಕಡಿಮೆಯಾಗಿ ಸಂಬಂಧ ಹೊಂದಿದೆ.[13] ಮಾದಿಗರು ಚರ್ಮ ಉದ್ಯೋಗಿಗಳಾಗಿದ್ದರೂ ಹಿಂದು ವರ್ಣ ವ್ಯವಸ್ಥೆಯಲ್ಲಿ ಅತಿ ಹೆಚ್ಚಿನ ಕಳಂಕಿತರಾಗಿದ್ದಾರೆ, ಆದಾಗ್ಯೂ ಪ್ರಾಚೀನ ಇತಿಹಾಸದಲ್ಲಿ ಪ್ರಸಿದ್ಧ ಬೇಟೆಗಾರರೆಂದು ಕರೆಸಿಕೊಂಡಿದ್ದಾರೆ. ಮಾತಮ್ಮ ಸಂಪ್ರದಾಯದ ಭಕ್ತಾದಿಗಳು ತಮ್ಮ ದೇವಸ್ಥಾನಗಳಲ್ಲಿ ಒಳ್ಳೆಯ ರೀತಿಯಲ್ಲಿ ಹಬ್ಬಗಳನ್ನು ಆಚರಿಸುತ್ತಾರೆ. ಆ ಸಂದರ್ಭದಲ್ಲಿ ದೇವಸ್ಥಾನಗಳ ಪೂಜಾರಿಗಳಾದ 'ಜಂಬೂಕಾ'ಗಳು ನೇತೃತವಹಿಸುತ್ತಾರೆ. ಆಗ ಭಕ್ತಾದಿಗಳು ತಮ್ಮ ಹೆಣ್ಣು ಮಕ್ಕಳನ್ನು ಅರ್ಪಿಸುತ್ತಾರೆ. ಸಂಗೀತ ವಾದ್ಯಗಳು ಮತ್ತು ನೃತ್ಯ ಹಬ್ಬದಾಚರಣೆಯಲ್ಲಿ ಅತ್ಯಂತ ಪ್ರಮುಖವಾಗಿದ್ದು, ಮಾತಮ್ಮಗಳು ಇದರಲ್ಲಿ ಪ್ರಮುಖ ಪಾತ್ರವನ್ನಾಡುತ್ತಾರೆ. ಅವರು ತಮ್ಮ ವೇಷ - ಭೂಷಣ, ಕೇಶಾಲಂಕಾರಗಳಿಂದಲೂ ಮತ್ತು ಕಾಮೋತ್ತೇಜಕ ವರ್ತನೆಗಳಿಂದ ಎಲ್ಲರ ಗಮನ ಸೆಳೆಯುತ್ತಾರೆ. ಅವರು ಮದ್ಯಪಾನದ ಮತ್ತಿನಲ್ಲಿ ನರ್ತಿಸುವ ರೀತಿ ಅವರಲ್ಲಿ ದೇವತೆ ಮೈದಾಳಿದ್ದಾಳೆಂದು ಕಂಡು ಬರುತ್ತದೆ. ಆದರೆ ಇದು ದೇವದಾಸಿಯರ ಶಾಸ್ತ್ರೀಯ ನರ್ತನದಂತಹ ನೃತ್ಯದಲ್ಲಿ ಸಾಮಾನ್ಯವಾಗಿ ಮಾತಮ್ಮಳಾಗಿ ಅರ್ಪಣೆಗೊಂಡ ಪ್ರಥಮ ರಾತ್ರಿಯಲ್ಲಿ ಅವಳು ಈ ರೀತಿಯಾಗಿ ನರ್ತಿಸುತ್ತಾಳೆ, ಆ ನಂತರ ಅವಳು ಲೈಂಗಿಕ ಜೀವನಕ್ಕೆ ಕಾಲಿಡುತ್ತಾಳೆ. ಮಾತಮ್ಮಗಳು ಹಬ್ಬದಾಚರಣೆಯಲ್ಲಿ ತನ್ನ ನೃತ್ಯದ ಮೂಲಕ ಸಾಕಷ್ಟು ಹಣವನ್ನು ಸಂಪಾದಿಸುತ್ತಾಳೆ ಹಾಗೂ ಕೆಲವರು ನೃತ್ಯವನ್ನೇ ವೃತ್ತಿಯಾಗಿ ಸ್ವೀಕರಿಸುತ್ತಾರೆ.

ದೇವದಾಸಿ ಪದ್ಧತಿಯ ಅಸ್ತಿತ್ವ :

ಲಭ್ಯವಾದ ಅಂಕಿ ಸಂಖ್ಯೆಗಳ ಪ್ರಕಾರ ಕರ್ನಾಟಕದಲ್ಲಿ 23,000 ಮತ್ತು ಆಂಧ್ರಪ್ರದೇಶದಲ್ಲಿ 17000 ದೇವದಾಸಿಯರು ಇರುವರೆಂದು ತಿಳಿದು ಬರುತ್ತದೆ. (ಈ ಕೆಳಗಿನ ಕೋಷ್ಟಕ ನೋಡಿ) ಈ ಎರಡು ರಾಜ್ಯಗಳ ಮಟ್ಟಿಗೆ ಹೇಳುವುದಾದರೆ ಈ ಅಂಕಿ ಸಂಖ್ಯೆಗಳು ದೇವದಾಸಿ ಪದ್ಧತಿಯನ್ನು ಹೆಚ್ಚಿಗೆ ಆಚರಿಸುವ ಜಿಲ್ಲೆಗಳಿಂದ ತೆಗೆದುಕೊಳ್ಳಲಾಗಿದ್ದು, ಬೇರೆ ಜಿಲ್ಲೆಗಳಲ್ಲೂ ಅಲ್ಪ ಪ್ರಮಾಣದಲ್ಲಿ ಅದರಂತೆ ದಕ್ಷಿಣದ ಎಲ್ಲ ರಾಜ್ಯಗಳಲ್ಲೂ ದೇವದಾಸಿಯರು ಇರುವುದು ಕಂಡು ಬರುತ್ತದೆ. ಈಗ ಈ ಆಚರಣೆಯನ್ನು ಕಾಯ್ದೆ ಬಾಹಿರಗೊಳಿಸಲಾಗಿರುವದರಿಂದ ಸರಿಯಾದ ಅಂಕಿ - ಸಂಖ್ಯೆಗಳು ದೊರೆಯುವದಿಲ್ಲ ಅದರಲ್ಲೂ ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ಪೋಲೀಸರು ಕ್ರಿಯಾಶೀಲರಾಗಿದ್ದು ಅರ್ಪಣೆಯನ್ನು ಮಾಡಗೊಡತ್ತಿಲ್ಲ. ದೇವದಾಸಿ ಅರ್ಪಣೆಗಳು ಸಾಕಷ್ಟು ಪ್ರಮಾಣದಲ್ಲಿ ಕ್ಷೀಣಿಸಿರುವ ಬಗ್ಗೆ ವರದಿಗಳು ಬಂದಿರುವದರಿಂದ ಅಧಿಕಾರಿಗಳ ಮಟ್ಟದಲ್ಲಿ ಈ ಆಚರಣೆ ನಿಂತು ಹೋಗಿದೆ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿ ವಿಮೋಚನಾ ಸಂಘವು ಈ ದಿಸೆಯಲ್ಲಿ ಕ್ರಿಯಾಶೀಲವಾಗಿ ಕಾರ್ಯಾಚರಮೆಯಲ್ಲಿದ್ದು ಅಲ್ಲಿ ಶೇಕಡಾ 95% ಆಚರಣೆ ನಿಂತಿದೆ ಎಂದು ವಂದಿ ಮಾಡಿದೆ. ಅದು ಎರಡೂ ರಾಜ್ಯಗಳಲ್ಲಿ ಅಲ್ಲಲ್ಲಿ ಕೆಲವೊಂದು ಅರ್ಪಣಾ ಪ್ರಕರಣಗಳು ವರದಿಗಳಾಗುತ್ತಿರುವದರಿಂದ ಈ ಪದ್ಧತಿಯು ಇನ್ನೂ ಮುಂದುವರಿದಿದೆ ಎಂದೇ ಅರಿತುಕೊಳ್ಳಬಹುದು. ಇದು ' ಜೋಗಿನಿ' ಮಾತಮ್ಮ ಮತ್ತು ದೇವದಾಸಿಯರೊಡನೆ ಸಮೀಕ್ಷಾ ಕಾಲದಲ್ಲಿ ಮಾತನಾಡಿದಾಗಲೂ ತಿಳಿದು ಬಂದಿದೆ.

ಕರ್ನಾಟಕದಲ್ಲಿ ದೇವದಾಸಿ ಪದ್ಧತಿ :

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಇತ್ತೀಚಿನ ಅಂಕಿ ಸಂಖ್ಯೆಗಳನ್ನು ಒದಗಿಸಿದೆ. ಕರ್ನಾಟಕ ರಾಜ್ಯದಲ್ಲಿ 27 ಜಿಲ್ಲೆಗಳಿದ್ದು ಅವುಗಳಲ್ಲಿ 10 ಜಿಲ್ಲೆಗಳಲ್ಲಿ ದೇವದಾಸಿ ಪದ್ಧತಿಯ ಆಚರಣೆ ಸಾಮಾನ್ಯವಾಗಿದೆ. ಬೆಳಗಾವಿ ಜಿಲ್ಲೆ ಸವದತ್ತಿಯಲ್ಲಿ ಎಲ್ಲಮ್ಮದೇವಿಯ ಪ್ರಮುಖ ದೇವಸ್ಥಾನವಿದ್ದು ಇದು ದೇವದಾಸಿ ಪದ್ಧತಿಯ ಮೂಲ ನೆಲೆ ಆಗಿದ್ದರೂ ಈ ಜಿಲ್ಲೆಗಿಂತ ಬೇರೆ ಎರಡು ಜಿಲ್ಲೆಗಳಲ್ಲಿ ದೇವದಾಸಿಯರ ಸಂಖ್ಯೆ ಹೆಚ್ಚಿದೆ. ಆದಾಗ್ಯೂ ಬೆಳಗಾವಿ ಜಿಲ್ಲೆಯ ದೇವದಾಸಿಯರಲ್ಲಿ ಲೈಂಗಿಕ ವ್ಯಾಪಾರಿ ವ್ಯವಸ್ಥೆ ಹೆಚ್ಚಿನ ಪ್ರಮಾಣದಲ್ಲಿ ಜಾರಿಯಲ್ಲಿದೆ.

| ಜಿಲ್ಲೆಗಳು | ದೇವದಾಸಿಯರ ಸಂಖ್ಯೆ | ಜಿಲ್ಲೆಗಳು | ದೇವದಾಸಿಯರ ಸಂಖ್ಯೆ |
|---|---|---|---|
| ಕೊಪ್ಪಳ | 4886 | ಬಳ್ಳಾರಿ | 1635 |
| ಬಾಗಲಕೋಟ | 4804 | ಗದಗ | 1471 |
| ಬೆಳಗಾವಿ | 3600 | ಗುಲಬರ್ಗಾ | 991 |
| ರಾಯಚೂರು | 2494 | ಹಾವೇರಿ | 617 |
| ವಿಜಾಪೂರ | 1964 | ಧಾರವಾಡ | 481 |

ಒಟ್ಟು 22943

ಆಂಧ್ರ ಪ್ರದೇಶದಲ್ಲಿನ ಜ್ಯೋಗಿನಿಯರು :

ಎಲಿಮಿನೇಶನ್ ಆಫ್‌ರೂರಲ್ ಪಾವರ್ಟಿ ಸಂಸ್ಥೆಯವರು ಆಂಧ್ರಪ್ರದೇಶ ಸರಕಾರದ ಒಂದು ಕಾರ್ಯಕ್ರಮದ ವರದಿ 'ವೆಲುಗು' ದಿಂದ ತೆಗೆದುಕೊಂಡ ಅಂಕಿ ಅಂಶಗಳ ಪ್ರಕಾರ ಆಂಧ್ರಪ್ರದೇಶದ 22 ಜಿಲ್ಲೆಗಳ ಪೈಕಿ 14 ಜಿಲ್ಲೆಗಳಲ್ಲಿ ಇರುವ ಜೋಗಿನಿಯರ ಸಂಖ್ಯೆಯನ್ನು ಇಲ್ಲಿ ಕೆಳಗೆ ಕೊಡಲಾಗಿದ್ದು, ಈ ಸಂಖ್ಯೆಯಲ್ಲಿ ಮಾತಮ್ಮಗಳ ಸಂಖ್ಯೆ ಸೇರಿಲ್ಲ ಹಾಗೂ ನಿರ್ದಿಷ್ಟವೂ ಆಗಿಲ್ಲ. [15]

| ಅ.ಸಂ. | ಜಿಲ್ಲೆಗಳು | ಜೋಗಿನಿಯರು | ಅ. ಸಂ. | ಜಿಲ್ಲೆಗಳು | ಜೋಗಿನಿಯರು |
|---|---|---|---|---|---|
| 1. | ಶ್ರೀ ಕಾಕುಲಂ | 140 | 8. | ಕರೀಮನಗರ | 9313 |
| 2. | ನೆಲ್ಲೂರ | 220 | 9. | ವಾರಂಗಲ್ | 1551 |
| 3. | ಕರ್ನೂಲ | 790 | 10. | ಮೆಹಬೂಬನಗರ | 1428 |
| 4. | ಅನಂತಪುರ | 556 | 11. | ಮೇಡಕ | 384 |
| 5. | ಚಿತ್ತೂರ | 332 | 12 | ನೆಲಗೊಂಡ | 68 |
| 6. | ಆದಿಲಾಬಾದ | 324 | 13 | ರಂಗಾರೆಡ್ಡಿ | 50 |
| 7. | ನಿಜಾಮಾಬಾದ | 1256 | 14 | ಹೈದ್ರಾಬಾದ | 387 |

ಒಟ್ಟು 16799

ಆಂಧ್ರಪ್ರದೇಶ ಮಹಿಳಾ ಸಾಮಖ್ಯ ಸಂಸ್ಥೆಯ ಪದಾಧಿಕಾರಿಗಳು (APMSS) (ಸರಕಾರದಿಂದ ಸ್ಥಾಪಿಸಲ್ಪಟ್ಟ ಒಂದು ಮಹಿಳಾ ಸಂಸ್ಥೆ) ಹಾಗೂ ಜೋಗಿನಿಯರೇ ಸ್ವತಃ ಒಪ್ಪಿಕೊಳ್ಳುವಂತೆ ಜೋಗಿನಿ ಸಂಪ್ರದಾಯವು ಅದರ ನಿರ್ಮೂಲನೆಗೆ ಎಷ್ಟೋ ಪ್ರಯತ್ನಗಳು ನಡೆದಿದ್ದರೂ ಅದು ಇನ್ನೂ ಅಸ್ತಿತ್ವದಲ್ಲಿದೆ. ಎಪಿಎಂಎಸ್‌ಎಸ್ (APMSS) ವು ಕೆಲವೇ ಮಂಡಳಗಳಲ್ಲಿ ಕೆಲಸ ಮಾಡುತ್ತಿರುವದರಿಂದ ಅದು ಕೆಲಸ ಮಾಡುವ ಕ್ಷೇತ್ರದಲ್ಲೇ ಕೇವಲ ಅರ್ಧದಷ್ಟು ಸಂಖ್ಯೆಯ ಜೋಗಿನಿಯರನ್ನು ತಲುಪಲು ಅದಕ್ಕೆ ಸಾಧ್ಯವಾಗಿದೆ. APMSS ನಲ್ಲಿ ಕ್ರಿಯಾಶೀಲವಾಗಿರುವ ಜೋಗಿನಿಯರೇ ನಂಬುವಂತೆ ದೂರದ ಪ್ರದೇಶಗಳಲ್ಲಿ ಜೋಗಿನಿಯರನ್ನು ಇದುವರೆಗೆ ತಲುಪಲಾಗಿಲ್ಲ.

APMSS ಕಾರ್ಯಕರ್ತರೇ ಒಪ್ಪಿಕೊಳ್ಳುವಂತೆ ತಮ್ಮ ಕಾರ್ಯಕ್ಷೇತ್ರದಲ್ಲಿ ಜೋಗಿನಿಯರನ್ನು ಅವರ ಸೋದರ ಮಾವನ ಸಂಬಂಧಿ ಪುರುಷರಿಗೆ ಉಪಪತ್ನಿಯಾಗಿ ಅಥವಾ ಎರಡನೇ ಹೆಂಡತಿಯಾಗಿ ಮದುವೆ ಮಾಡಿ ಕೊಡುವ ಸಂಪ್ರದಾಯವು ಇನ್ನೂ ಮುಂದುವರಿದಿದೆ. ಇದು ಹೆಣ್ಣು ಹುಡಿಗೆಯ ಶೋಷಣೆಯಾಗಿದ್ದರೂ, ಅವಳ ಜೀವನ ಹಾಳಾಗುತ್ತದೆ ಎಂದಾದರೂ ಅವಳು ಇಡೀ ಗ್ರಾಮದ ಸೊತ್ತಾಗುವಂತಿದ್ದರೂ ಇದು ನಡೆದೆ ಇದೆ. ಇದು ಆರ್ಥಿಕ ಉದ್ದೇಶ ಹೊಂದಿದೆ ಎನ್ನುವದಕ್ಕಿಂತಲೂ ಹುಡಿಗೆಯನ್ನು ಮನೆಯಲ್ಲಿಯೇ ತಂದೆ - ತಾಯಂದಿರ ಪೋಷಣೆಗಾಗಿಯೋ ಅಥವಾ ಹುಡಿಗೆಗೆ ಸರಿಯಾದ ವರ ಸಿಗುತ್ತಿಲ್ಲವೆಂತಲು, ಅಥವಾ ವರದಕ್ಷಿಣೆ ಪಿಡುಗಿನ ಸಲುವಾಗಿಯೇ ಆಗಿರದೆ ಧಾರ್ಮಿಕ ನಂಬಿಕೆಗಳೇ ಬಲವಾದ ಕಾರಣವಿರಬಹುದು.

ದೇವದಾಸಿ ಅಥವಾ ಜೋಗಿನಿಯರ ಅರ್ಪಣೆ ಸಂಖ್ಯೆಯು ಇಳಿಮುಖವಾಗಿದ್ದರೂ ಕೂಡ ಈ ಹಿಂದೆ ಅರ್ಪಣೆ ಆಗಿದ್ದವರು ಅಸ್ತಿತ್ವದಲ್ಲಿ ಇದ್ದಾರೆ ಹಾಗೂ ನಿರ್ಮೂಲನೆ ಪಥದಲ್ಲಿ ಈ ಸಂಪ್ರದಾಯವಿದ್ದರೂ ಅವರ ಸಮಸ್ಯೆಗಳೇನೂ ಅದರಿಂದ ಕಡಿಮೆಯಾದಂತಿಲ್ಲ. ಸ್ವಂಯ ಇಚ್ಛೆಯ ಅರ್ಪಣೆಯ (ಜೋಗಿನಿ, ಮಾತಮ್ಮ, ದೇವದಾಸಿ) ಚಟುವಟಿಕೆಯ ವಿಷಯವಾಗಿ ಹೇಳುವುದಾದರೆ ಅದರ ಮುಖ್ಯ ಉದ್ದೇಶಗಳಲ್ಲಿ ಯಾವುದೇ ಬದಲಾವಣೆ ಇಲ್ಲ ಹಾಗೂ ಮುಂಬಯಿಯಂತಹ ಮಹಾನಗರಗಳಲ್ಲಿನ ಬಾರ್ ನೃತ್ಯದ ಉದ್ಯೋಗವು ಅವರನ್ನು ಲೈಂಗಿಕ ವ್ಯಾಪಾರಕ್ಕಿಳಿಸುವ ಮಹಾದ್ವಾರವಾದಂತಾಗಿದೆ.

ಮೆಹಬೂಬನಗರ ಜಿಲ್ಹೆಯಲ್ಲಿ APMSS ವು ಮಹಿಳೆಯರ ಸಾಗಾಟವನ್ನು ಗುರುತಿಸಿಲ್ಲವಾದರೂ ಕರ್ನಾಟಕದ ಬೆಳಗಾವಿ ಜಿಲ್ಹೆಯಲ್ಲಿ ಎಲ್ಲಮ್ಮ ದೇವಸ್ಥಾನದ ಪೂಜಾರಿಗಳು, ವೇಶ್ಯಾಗೃಹಗಳ ಮಾಲೀಕರು ತಲೆಹಿಡುಕರು, ಮಧ್ಯಸ್ಥಕೆದಾರರುಗಳು ಅದರಂತೆ ವೃದ್ಧ ದೇವದಾಸಿಯರು ತರುಣಿಯರನ್ನ ದೇವದಾಸಿಯರನ್ನಾಗಿ ಅರ್ಪಣೆ ಮಾಡಿ ವೇಶ್ಯಾಗೃಹಗಳಿಗೆ ಅವರನ್ನು ಸಾಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆಂಬುದು ತಿಳಿದು ಬರುತ್ತದೆ. ಈ ಅರ್ಪಣೆಯ ಖರ್ಚನ್ನು ಈ ಮಧ್ಯವರ್ತಿಗಳೇ ವಹಿಸುವರೆಂಬುದು ಮುಖ್ಯ.

ಶೇಕಡಾ 30 ರಷ್ಟು ದೇವದಾಸಿಯರು ಮುಂಬಯಿ ಮುಂತಾದ ಮಹಾನಗರಿಗಳ ಕೆಂಪು ಪ್ರದೇಶಕ್ಕೆ ಸಾಗಾಟಗೊಳ್ಳುತ್ತಿದ್ದಾರೆಂಬುದನ್ನು ಬೆಳಗಾವಿ ಜಿಲ್ಲೆಯ ದೇವದಾಸಿಯರು ಸ್ವ-ಸಹಾಯ ಚಳುವಳಿಯು 2001 ರಲ್ಲಿ ಕೈಕೊಂಡ ಅಧ್ಯಯನವು ತಿಳಿಸುತ್ತದೆ. [17] ಕರ್ನಾಟಕದಲ್ಲಿ ದೇವದಾಸಿ ಅರ್ಪಣೆಯ ಬಡತನದ ಮೂಲದಿಂದ ಹುಟ್ಟಿ ತಂದೆ - ತಾಯಿಗಳ ಮನಸ್ಸಿಚ್ಛೆ, ಅಕ್ಕ, ಪಕ್ಕದವರ ಹಾಗೂ ಲೈಂಗಿಕ ವ್ಯಾಪಾರದ ಮಧ್ಯವರ್ತಿಗಳ ಪ್ರೇರಣೆಯಿಂದ ಹೆಣ್ಣು ಹುಡಿಗೆಯರ ಲೈಂಗಿಕವಾಗಿ ಮಾರಾಟಗೊಳ್ಳುವ ಸ್ಥಿತಿಯನ್ನು ಅವಲಂಬಸಿ ನಡೆದಿದೆ ಎಂಬುದರಲ್ಲಿ ಸಂಶಯವೇ ಇಲ್ಲ. ಬಹಳಷ್ಟು ತಂದೆ - ತಾಯಿಗಳಿಗೆ ತಮ್ಮ ಮಗಳು ಎಂತಹ ಹಿಂಸೆ, ನೋವು ಹಾಗೂ ಅವಮಾನಗಳನ್ನು ಅನುಭವಿಸಬೇಕಾಗಿ ಬರುತ್ತದೆಂಬುದರ ಅರಿವೇ ಪರಿವೇಯೆ ಇಲ್ಲ.

ಕರ್ನಾಟಕದ ಕಿಡ್ಸ ಸಂಸ್ಥೆಯ ಅಧ್ಯಯನವು ದೇವದಾಸಿಯರ ಅರ್ಪಣೆಯ ಸಂಖ್ಯೆಯು ಇಳಿಮುಖಗೊಂಡಿದೆ ಎಂಬುದನ್ನು ಗುರುತಿಸಿದೆ. ಬೆಳಗಾವಿ ಜಿಲ್ಹೆಯ 37 ಗ್ರಾಮಗಳ 430 ದೇವದೇಸಾಯಿಯರನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಾಗ ಕೇವಲ ಶೇಕಡಾ 27 ರಷ್ಟು ದೇವದಾಸಿಯರು ಮಾತ್ರ 18 ರಿಂದ 30 ವಯೋಮಿತಿಯೊಳಗಿನವರು ಲೈಂಗಿಕವಾಗಿ ಕ್ರಿಯಾಶೀಲರಾಗಿರುವದು, ಕೇವಲ ಶೇಕಡಾ 6 ರಷ್ಟು ಮಾತ್ರ 18 ರೊಳಗಿನವರೆಂದೂ ತಿಳಿದು ಬರುತ್ತದೆ. ಇದು ಗಮನಾರ್ಹವಾಗಿ ಅರ್ಪಣೆಯಲ್ಲಿ ಇಳಿಮುಖವಾಗಿರುವದನ್ನು ತೋರಿಸುತ್ತದೆ ; ಆದರೆ ಸಧ್ಯ ಮುಂಬಯಿ ಮುಂತಾದ ಪ್ರದೇಶಗಳ ವೇಶ್ಯಾವಾಟಿಕೆಗಳಲ್ಲಿ ಕಾರ್ಯ ನಿರತರಾದ ದೇವದಾಸಿಯರನ್ನು ಈ ಅಂಕಿ ಸಂಖ್ಯೆಗಳು ಒಳಗೊಂಡಿಲ್ಲವಾಗಿ, ಇದು ಸರಿಯಾದ ಪ್ರಾತಿನಿಧಿಕವೆನಿಸುವದಿಲ್ಲ.

## ಅರ್ಪಣೆಗೆ ಮತ್ತು ಮುಂದುವರಿಕೆಗೆ ಮುಂದಿಟ್ಟ ಕಾರಣಗಳು

ಸಮೀಕ್ಷೆಗಳು ಜೋಗಿನಿ, ಮಾತಮ್ಮ ಹಾಗೂ ದೇವದಾಸಿ ಪದ್ಧತಿಯು ಮುಂದುವರಿಯಲು ಹಾಗೂ ಅರ್ಪಣೆಗೈಯಲು ಸಮಕಾಲೀನ ವಿವಿಧ ಕಾರಣಗಳ ಮೇಲೆ ಬೆಳಕು ಚೆಲ್ಲಿವೆ. ಮುಖ್ಯವಾಗಿ ಕಾರಣಗಳನ್ನು ಎರಡು ವಿಭಾಗಗಳಲ್ಲಿ ಗುರುತಿಸಲಾಗಿದೆ.

## ಅಂಧಃ ಶ್ರದ್ಧೆಗಳ ವ್ಯವಸ್ಥೆಯಡಿಯಲ್ಲಿನ ಕಾರಣಗಳು :

ಗ್ರಾಮದೇವತೆಯ ಮೇಲಿನ ನಂಬಿಕೆಗಳು, ಸಮುದಾಯದಲ್ಲಿ ಗ್ರಾಮದೇವತೆಯ ಇರುವಿಕೆ, ಅವಳ ಶಕ್ತಿ ಮತ್ತು ಪ್ರಭಾವಗಳನ್ನು ಒಳಗೊಂಡಿವೆ. ಕರ್ನಾಟಕದಲ್ಲಿ ಕಿಡ್ಸ ಸಂಸ್ಥೆಯು ನಡೆಸಿದ ಸಮೀಕ್ಷೆಯ ಪ್ರಕಾರ ಶೇಕಡಾ 31 ರಷ್ಟು ಅರ್ಪಣೆಗಳು ಸಂಪ್ರದಾಯವನ್ನವಲಂಬಿಸಿ, ಶೇಕಡಾ 50 ರಷ್ಟು ಗ್ರಾಮದೇವತೆಯು ಮುನಿದುಕೊಳ್ಳುತ್ತಾಳೆಂಬ ಹೆದರಿಕೆಯನ್ನವಲಂಬಿಸಿ ಅರ್ಪಣೆಗಳು ಜರುಗುತ್ತವೆ. ಶೇಕಡಾ 16 ರಷ್ಟು ಅರ್ಪಣೆಗಳು ಮನೆಯ ಸಮಸ್ಯೆಗಳ ಕಾರಣಗಳಿಂದ ಜರುಗುತ್ತವೆ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಅರ್ಪಣೆಗಳು ಜರುಗಿದರೂ ಧಾರ್ಮಿಕ ಕಾರಣಗಳು ಬಹು ಮಹತ್ವದ ಪಾತ್ರವಹಿಸುತ್ತಿವೆ.

## ಅರ್ಪಣೆಗೆ ಪ್ರಚೋದನಾತ್ಮಕ ಕಾರಣಗಳು :

ಈ ಕಾರಣಗಳನ್ನು ಬೆಳಗಾವಿಗಿಂತ ಮೆಹಬೂಬನಗರ ಮತ್ತು ಚಿತ್ತೂರಗಳಲ್ಲಿ ಪರೀಕ್ಷಿಸಲಾಗಿದೆ. ಇವುಗಳಲ್ಲಿ ಎರಡು ಬಗೆಗಳು. ಒಂದನೇಯದಾಗಿ ವಸ್ತು - ಸ್ಥಿತಿ ಆಧಾರಿತ ಅಂದರೆ ಮಗು ಯಾವುದಾದರೂ ಗುಣ ಹೊಂದಲಾರದ ರೋಗರುಜಿನಗಳಿಂದ ಬಳಲುತ್ತಿದ್ದರೆ, ಅದರ ನಿವಾರಣೆಗಾಗಿ ಕುಟುಂಬದಲ್ಲಿ ಗಂಡು ಮಗು ಜನಿಸದೇ ಹೋದರೆ ಅರ್ಪಣೆಗಾಗಿ ಹರಕೆ ಹೊತ್ತುಕೊಂಡು ಅದನ್ನು ಪೂರೈಸುವದು. ಹೆಣ್ಣು ಮಗುವನ್ನು ಗ್ರಾಮದೇವತೆಗೆ ಅರ್ಪಿಸಿದ ನಂತರ ಆ ಕುಟುಂಬದಲ್ಲಿ ಮಕ್ಕಳು ಜನಿಸಿದರೆ ಹೆಣ್ಣಾಗಲಿ ಗಂಡಾಗಲಿ ಅವುಗಳಿಗೆ ದೇವತೆಯ ನಾಮಕರಣ ಮಾಡುವದು ಅದರಂತೆ ಅರ್ಪಣೆಯಿಂದ ಹೆಣ್ಣು ಮಗುವು ಆ ಕುಟುಂಬದಲ್ಲಿ ಗಂಡು ಮಗುವಿನ ಎಲ್ಲ ಹಕ್ಕು-ಬಾಧ್ಯತೆಗಳನ್ನು ಪಡೆದುಕೊಳ್ಳುತ್ತದೆ. ಅವಳು ತನ್ನ ಗಳಿಕೆಯನ್ನು ತವರು ಮನೆಗೆ ತರುತ್ತಾಳೆ ಹೊರತು ಇಟ್ಟುಕೊಂಡವನ ಮನೆಗಲ್ಲ, ಮನೆಯ ಹಿರಿಯ ಮಗನಾಗಿ ತಂದೆ - ತಾಯಿಗಳು ತೀರಿಕೊಂಡಾಗ ಅಂತ್ಯವಿಧಿಗಳನ್ನು ಪೂರೈಸುವಂತೆಯೇ ಅರ್ಪಿತ ಹೆಣ್ಣು ಮಗು ಎಲ್ಲ ವಿಧಿ-ವಿಧಾನಗಳನ್ನು ಪೂರೈಸುತ್ತಾಳೆ. ಕೆಲವೊಂದು ಬಡ ಕುಟುಂಬಗಳಿಗೆ ಅರ್ಪಣೆಯಾದ ಹೆಣ್ಣು ಮಗುವನ್ನು ಇಟ್ಟು ಕೊಂಡಾತ ಸ್ವಲ್ಪ ಮಟ್ಟಿಗೆ ಹಣಕಾಸಿನ ನೆರವನ್ನು

ಲೈಂಗಿಕ ಸೇವೆಗೆ ಪ್ರತಿಯಾಗಿ ನೀಡುತ್ತಾನೆ.

ಆಂಧ್ರಪ್ರದೇಶದಲ್ಲಿ : ಪ್ರಚೋದನಾತ್ಮಕ ಕಾರಣಗಳು :

ಸಾಮಾನ್ಯವಾಗಿ ಅರ್ಪಣೆಯು ಅತ್ಯಂತ ಕಿರಿಯ ವಯಸ್ಸಿನಲ್ಲಿ ಜರುಗುತ್ತದೆ. ಹಾಗೂ ಅದರ ಬಗ್ಗೆ ಆ ಮಗುವಿಗೆ ಯಾವುದೇ ತಿಳುವಳಿಕೆ ಇರುವದಿಲ್ಲ. ಮೆಹಬೂಬನಗರ ಮತ್ತು ಚಿತ್ತೂರಗಳಲ್ಲಿನ 100 ಜೋಗಿನಿ / ಮಾತಮ್ಮಗಳು ತಮ್ಮ ತಾಯಿ ತಂದೆಗಳ ನಿರ್ಧಾರದಿಂದ ಅರ್ಪಣೆಗಾಗಿ ಈ ಕೆಳಗಿನಂತೆ ಪ್ರಚೋದನೆಯ ಕಾರಣಗಳನ್ನು ನೀಡಿದ್ದಾರೆ.

**ಅರ್ಪಣೆಗೆ ಕಾರಣಗಳು : ಆಂಧ್ರಪ್ರದೇಶ**

| ಅ. ಸಂ. | ಕಾರಣಗಳು | ಸಂಖ್ಯೆ |
|---|---|---|
| 1. | ಕೆಮ್ಮ - ನೆಗಡಿ ಜ್ವರ | 56 |
| 2. | ಫಿಟ್ಸ್ | 46 |
| 3. | ಕಣ್ಣು ತೆರೆಯಲು ವಿಫಲತೆ | 30 |
| 4. | ವಾಂತಿ ಭೇದಿ | 24 |
| 5. | ಮೈಲಿ ಬೇನೆ | 22 |
| 6. | ಗಂಡು ಸಂತಾನವಿಲ್ಲದೆ ಇರುವದು | 20 |
| 7. | ಮೊಲೆಹಾಲಿನ ಕೊರತೆ | 19 |
| 8. | ಗಾಯಗಳು | 13 |
| 9. | ಪೋಲಿಯೊ | 07 |
| 10. | ಕುಟುಂಬದ ಸದಸ್ಯರ ಕಾಯಿಲೆ | 07 |
| 11. | ಅಂಗವಿಕಲತೆ | 06 |
| 12. | ಹೆರಿಗೆಯ ಸಮಯದ ತೊಂದರೆಗಳು | 04 |
| 13. | ಮೂಗ / ಕಿವಡತನ | 03 |
| 14. | ಆಕಸ್ಮಿಕಗಳು | 03 |
| 15. | ಕಾಮಣಿ | 02 |
| 16. | ಕರುಳು ಬೇನೆ / ನೋವು | 02 |

ಮೂಲ : ಆಂಟಿ ಸ್ಲೇವರಿ ಇಂಟರನ್ಯಾಶನಲ್ ಸಂಸ್ಥೆಗೆ ನೀಡಿದ ಶ್ರಾವಂತಿ ಸಂಸ್ಥೆಯ ವರದಿ ಡಿಸೆಂಬರ 2006

ಕರ್ನಾಟಕದಲ್ಲಿ ವಂಶಪಾರಂಪರ್ಯತೆ ಮತ್ತು ಸಂಪ್ರದಾಯಗಳನ್ನು ಅರ್ಪಣೆಯ ಮುಖ್ಯ ಪ್ರಚೋದಕ ಕಾರಣಗಳಾಗಿ ಹೇಳಿದರೆ ಆಂಧ್ರಪ್ರದೇಶದಲ್ಲಿ ತನ್ನ ಮಕ್ಕಳ ಮೇಲೆ ಗ್ರಾಮದೇವತೆಯು ತೋರಿಸುವ ಅತೃಪ್ತಿಯ ಹೆದರಿಕೆ ಮುಖ್ಯ ಪ್ರಚೋದಕ ಕಾರಣವೆಂದು ನಂಬಿಕೆ ಇದೆ. ಇದಕ್ಕೆ ಜಿಡ್ಡುಗಟ್ಟಿದ ಕೂದಲಿನ ಉದಾಹರಣೆ ಕೊಡಬಹುದು. ಈ ಕೂದಲಿನ ಜಿಡ್ಡುಗಟ್ಟುವಿಕೆಯ ಪೌಷ್ಟಿಕತೆಯ ಕೊರತೆಯಿಂದ ವೈದ್ಯಕೀಯ ಕಾರಣಗಳಿಗಾಗಿ ಆಗಿರುತ್ತದೆ. ಆದರೆ ಭಕ್ತಾದಿಗಳು ಇದು ದೇವಿಯ ಶಾಪವೆಂದು ನಂಬಿಕೆ ಇಡುತ್ತಾರೆ. ಇನ್ನು ಕೆಲವರು ರೋಗರುಜಿನಗಳಿಂದ ಬಳಲುತ್ತಿರುವ ಮಕ್ಕಳನ್ನು ಪರಿಹಾರಾರ್ಥವಾಗಿ ದೇವಿಗೆ ಅರ್ಪಿಸುತ್ತಾರೆ. ಆಂಧ್ರ ಪ್ರದೇಶದಲ್ಲಿ ಶೇಕಡಾ 20 ಅರ್ಪಣೆಗಳು ಗಂಡು ಸಂತಾನವಿಲ್ಲದ್ದಕ್ಕಾಗಿ ಪ್ರಚೋದನೆಗೊಂಡು ಜರುಗುತ್ತವೆ ಎಂದು ವರದಿ ತಿಳಿಸುತ್ತದೆ. ಇದು ಒಂದು ಗೊತ್ತಿರುವಂತಹ ವಿಷಯವೇ ಆದರೂ ಕರ್ನಾಟಕದಲ್ಲಿ ಸಮೀಕ್ಷೆಯು ಇದನ್ನು ಅಷ್ಟಾಗಿ ಹೇಳಿಲ್ಲ. ಮಗುವಿನ ಅನಾರೋಗ್ಯವು ದೈವೇ ಪ್ರಭಾವದಿಂದ ಆಗುತ್ತದೆಂಬ ಮೂಢ ನಂಬಿಕೆಯನ್ನು ತೊಡೆದು ಹಾಕಬೇಕಾಗಿರುವದು ಅನಿವಾರ್ಯವಾಗಿದೆ.

ಬಡತನ ಅರ್ಪಣೆಗೆ ಒಂದು ಮಹತ್ವದ ಪ್ರಚೋದನಾತ್ಮಕ ಕಾರಣವೆಂದು ಎಲ್ಲಿಯೂ ಹೇಳಿಲ್ಲವಾದರೂ ಮಾತಮ್ಮ ಮತ್ತು ಜೋಗಿನಿಯರ ಎಲ್ಲ ಕುಟುಂಬಗಳು ಬಡತನದಿಂದ ಬಳಲುತ್ತಿರುವದು ಮಾತ್ರ ವಾಸ್ತವ ಸಂಗತಿ ಹೆಣ್ಣಿಗೆ ಸಾಕಷ್ಟು ವರದಕ್ಷಿಣಿ ಕೊಡಬೇಕಾಗುವದೆಂಬುದು ಹಾಗೂ ಜೋಗಿನಿಯಾಗಿ ಅವಳನ್ನು ಮಾಡಿದರೆ ಅವಳಿಗೆ ಮಾತಾಪಿತರು ಏನೂ ಬದುಕಿಗಾಗಿ ಖರ್ಚು ಮಾಡುವದು ತಪ್ಪುತ್ತದೆಂಬ ಅಂಶಗಳು ಅರ್ಪಣೆಗೆ ಪ್ರಚೋದಕವಾಗಿವೆ. ಬಡತನ ಮತ್ತು ನಿರಕ್ಷರತೆಗಳು ಶಿಕ್ಷಣದ ಕೊರತೆಯ ಪರಿಣಾಮಗಳೇ ಆಗಿವೆ ಹಾಗೂ ಈ ಶಿಕ್ಷಣದ ಕೊರತೆಯ ಜೊತೆಗೆ ಅಂಧಃ ಶ್ರದ್ಧೆ ಮತ್ತು ಸಮುದಾಯದ ಶಿಕ್ಷೆಗಳು ಕುಟುಂಬದ ಅರ್ಪಣಾ ನಿರ್ಧಾರ ತೆಗೆದುಕೊಳ್ಳುವಲ್ಲಿ ಪ್ರಮುಖ ಪ್ರಚೋದನೆಗಳಾಗಿವೆ. ಮೆಹಬೂಬ ನಗರದ ಕಾರ್ಯಾಗಾರದಲ್ಲಿ ಅವರ ವೇಷ - ಭೂಷಣಗಳಿಂದ ಅವರ ಕೆಳ ಸಾಮಾಜಿಕ ಆರ್ಥಿಕ ಮಟ್ಟವನ್ನು ಅರಿತುಕೊಳ್ಳಬಹುದಾಗಿತ್ತು.

ಅದರಂತೆ ಅವರ ದೈಹಿಕ ಬೆಳವಣಿಗೆಯಿಂದಲೂ ಅದನ್ನು ಅರಿತುಕೊಳ್ಳಬಹುದಾಗಿತ್ತು.

**ಪ್ರಾಯಶ್ಚಿತಾರ್ಥ ಕಾರಣಗಳು - ಬೆಳಗಾವಿ**

ಬೆಳಗಾವಿಯ ಸಮೀಕ್ಷೆಯಲ್ಲಿ ಸಾಮಾಜಿಕ ಆರ್ಥಿಕ ಕಾರಣಗಳನ್ನು ಅರಿತುಕೊಳ್ಳಲು ನಿರ್ದಿಷ್ಟ ಪ್ರಯತ್ನವನ ಮಾಡಲಾಯಿತು.

| | |
|---|---|
| ಧಾರ್ಮಿಕ | |
| ಪರಕೆ ಹೊರುವುದು (ಕುಟುಂಬದ ಸಮಸ್ಯೆ ಪರಿಹಾರ್ಥವಾಗಿ) | 69 |
| ಭಕ್ತಿ (ದೇವತೆಯ ಅಂಜಿಕೆ, ಕುಟುಂಬದ ಸಂರಕ್ಷಣೆ) | 108 |
| ಸಂಪ್ರದಾಯ ಬದ್ಧ ಕುಟುಂಬ | 133 |
| ನಂಬಿಕೆ (ವಿಶ್ವಾಸ, ಭಕ್ತಿಯ ತೀವ್ರತೆ) | 110 |
| ಉತ್ತವಿಲ್ಲದೆ | 10 |
| ಒಟ್ಟು ಕುಟುಂಬಗಳು | **430** |

| | | | |
|---|---|---|---|
| ಆರ್ಥಿಕ | | ಸಾಮಾಜಿಕ | |
| ಬಡತನ | 100 | ಸಾಮಾಜಿಕ ಒತ್ತಡ | 177 |
| ಗಳಿಕೆಗಾಗಿ | 124 | ತಪ್ಪು ಸಲಹೆ | 124 |
| ವೇಶ್ಯಾಗೃಹದಲ್ಲಿನ ಕೆಲಸ | 000 | ವೇಶ್ಯಾಗೃಹದಲ್ಲಿ ಕೆಲಸ | 000 |
| ಉತ್ತರವಿಲ್ಲದ | 206 | ಉತ್ತರವಿಲ್ಲದ | 206 |
| | **430** | ಒಟ್ಟು | **430** |

**ದೇವದಾಸಿಯಾಗಿ ಜೀವನದ ಗುಣಲಕ್ಷಣಗಳು :**

ಕೌಟುಂಬಿಕ ದುರ್ದೈವವೋ ಕೊರತೆಗಳೊ ಅಥವಾ ಸಾಮಾಜಿಕವಾಗಿ ಶೋಷಿತ ಜ್ಯಾತಿಯವರಾಗಿಯೋ ಅಥವಾ ಪುರುಷ ಪ್ರಧಾನ ವ್ಯವಸ್ಥೆಯೋ ಇವು ಸಾಮಾನ್ಯವಾಗಿ ಸರ್ವಸಾಮಾನ್ಯವಾದ ಸಂಗತಿ ಏನೆಂದರೆ ಹೆಣ್ಣುಗಳು ಬಡತನದಲ್ಲಿ ಅತಂತ್ಯ ಕಠಿಣತರವಾದ ಜೀವನವನ್ನು ನಡೆಸುತ್ತಾರೆಂಬುದು ಹೆಣ್ಣಿನ ಅರ್ಪಣೆಗೆ ಕಾರಣವಾದ ಅಂಶಗಳಾಗಿವೆ. ದಲಿತ ಹೆಣ್ಣುಗಳು ಶಾಲೆಯ ಮೆಟ್ಟಲೇರುವುದೇ ಒಂದು ಕಷ್ಟ ಸಾಧ್ಯವಾದ ಸಂಗತಿ, ಅಲ್ಲದೇ ಅವರು ಯಾವುದೇ ಪರಿಣತಿ ಇಲ್ಲದ ಕೆಲಸಗಳಲ್ಲಿ ಅತೀ ಚಿಕ್ಕ ವಯಸ್ಸಿನಲ್ಲಿ ಮಾಡಲು ಹೋಗಬೇಕಾಗುವುದು ಅಲ್ಲದೇ ಋತುಮತಿಯಾದ ತಕ್ಷಣ ಒತ್ತಾಯದ ಕಾನೂನು ಮಿತಿಯ ಒಳಗಿನ ವಯಸ್ಸಿನ ಮದುವೆಗೆ ಒಳಗಾಗಬೇಕಾಗುವದು. ದೇವದಾಸಿ ಆಗುವದರಿಂದ ಸದ್ಯದ ಎಲ್ಲ ತೊಂದರೆದಾಯಕ ಅಂಶಗಳಿಂದ ಅಂದರೆ ಬಡತನ ಮತ್ತು ಮಹಿಳಾ ಅಧಿಕಾರರಹಿತತೆಗಳಿಂದ ಹೊರ ಬಂದು ನಿಲ್ಲಲು ಸಾಧ್ಯವಾಗುತ್ತದೆಂಬ ತಿಳುವಳಿಕೆ ಅವರನ್ನು ಕಾಡುತ್ತದೆ.

**ಮುಖ್ಯವಾಗಿ ಈ ಕೆಳಗಿನ ಗುಣಲಕ್ಷಣಗಳನ್ನು ಗುರುತಿಸಲಾಗಿದೆ. ಸಾಮಾನ್ಯರಂತೆ ಮದುವೆಯಾಗದಿರುವಿಕೆ :**

ಅರ್ಪಣೆ ಅಥವಾ ಕಿರಿಯ ವಯಸ್ಸಿನಲ್ಲಿಯೇ ಒತ್ತಾಯದ ಮದುವೆ ಎಷ್ಟೇ ದೌರ್ಜನ್ಯಕಾರಿ ಇದ್ದಾಗಲೂ ಸಹ, ಇದಕ್ಕಿಂತಲೂ ಹೆಚ್ಚಿನ ದೌರ್ಜನ್ಯಕಾರಿ ಅಂಶವೆಂದರೆ, ದೇವದಾಸಿಯನ್ನು ದೇವದಾಸಿ ಆಗದ ಸಹೋದರಿಗೆ ಹೋಲಿಸಿದರೆ ದೇವದಾಸಿಯು ಸಾಮಾನ್ಯರಂತೆ ಮದುವೆ ಆಗದಿರುವದೇ ಹೆಚ್ಚಿನ ದೌರ್ಜನ್ಯದ ವಿಷಯವಾಗಿದೆ. ಭಾರತೀಯ ಸಮಾಜದಲ್ಲಿ ಅದರಲ್ಲೂ ಕೆಳಸ್ಥರದಲ್ಲಿ ಮದುವೆಯಾಗದಿರುವದು ಮಹಿಳೆಗೆ ಗೌರವ ತರುವಂತಹದಲ್ಲ, ಕಟುವಾದ ಕಟ್ಟಳೆ ಹೊಂದಿದ ಸಮಾಜದಲ್ಲಿ ತನ್ನ ರಕ್ಷಣೆಗೆ ಮತ್ತು ಕುಟುಂಬ ಜೀವನಕ್ಕೆ ಆರ್ಥಿಕ ಆಧಾರಕ್ಕೆ, ಸಂತಾನ ಪ್ರಾಪ್ತಿಗೆ ಸಂತಾನಕ್ಕೆ ತಂದೆಯ ಹೆಸರು ನೀಡಲು, ಸಂತಾನವನ್ನು ಅಧಿಕೃತಗೊಳಿಸಲು ಮತ್ತು ಸಾಮಾಜಿಕ ಸ್ವೀಕಾರಕ್ಕಾಗಿ ಹೆಣ್ಣಿಗೆ ಗಂಡ ಅನಿವಾರ್ಯವೇ ಲೈಂಗಿಕವಾಗಿ ಜಾಗೃತಳಾಗಿದ್ದೂ ಮದುವೆಯಾಗದಿರುವದು ಹೆಣ್ಣಿಗೆ ಜೀವಾವಧಿ ಶಿಕ್ಷೆ ಹಾಗೂ ಸಾಮಾಜಿಕ ಕಳಂಕವೆನಿಸುವದು ಮದುವೆಯಾಗದ ಹೆಣ್ಣು ಪರ ಪುರುಷನ ಲೈಂಗಿಕ ಬಳಕೆಗೆ ಒಳಗಾಗುವದೆಂದರೆ ಅವಳು ಕುಟುಂಬದದಿಂದ ತಿರಸ್ಕೃತಳೆಂದೇ ಭಾವಿಸಲಾಗುವದು. ಆದರೆ ದೇವದಾಸಿ ಜೋಗಿನಿ, ಮಾತಮ್ಮ ಆಗುವದರಿಂದ ಈ ಯಾವುದೇ ಸಾಮಾಜಿಕ ಕೌಟುಂಬಿಕ ಸಮಸ್ಯೆಗಳು ಅವಳನ್ನು ಕಾಡಲಾರವು ಆದರೆ ಸಾಮಾಜಿಕ ಕಳಂಕ ಮಾತ್ರ ದೊಡ್ಡದಾಗಿರುತ್ತದೆ.

ದೇವದಾಸಿ ಅರ್ಪಣ ನಿಷೇದ ಕಾಯ್ದೆಗಳು ದೇವದಾಸಿಯು ಮದುವೆ ಆಗುವದನ್ನು ಕಾಯ್ದೆ ಬದ್ಧಗೊಳಿಸಿದ್ದರೂ ಪರಿಸ್ಥಿತಿ ಸಾಕಷ್ಟು ಸುಧಾರಿಸಿಲ್ಲ, ಕರ್ನಾಟಕಾ ದೇವದಾಸಿ ಅರ್ಪಣ ನಿಷೇದ ಕಾಯ್ದೆ 1984 ರ ಪ್ರಕಾರ ದೇವದಾಸಿಯನ್ನು ಮದುವೆಯಾದ

ದಂಪತಿಗಳಿಗೆ ಸರಕಾರವು ರೂ. 3000/- ಗಳ ಉತ್ತೇಜನ ನೀಡಲಾಗುತ್ತಿದೆ. ಆದರೆ ಮದುವೆಗಳು ಸಾಮಾನ್ಯವಾಗಿ ಮುರಿದು ಬೀಳುತ್ತವೆ. ಈ ಉತ್ತೇಜನ ಧನವು ಮಧ್ಯರ್ತಿಗಳ ಅಥವಾ ಮದುವೆಯ ಲೋಭೀ ಗಂಡುಗಳ ಪಾಲಾಗುತ್ತದೆ ಹೊರತು ದೇವದಾಸಿಗೆ ಲಾಭವಾಗುತ್ತಿಲ್ಲ. ಇದರಿಂದ ಅವಳ (ದೇವದಾಸಿ) ಕೆಲವು ಸಾಮಾನ್ಯ ಹಕ್ಕುಗಳು ಅಂದರೆ ಆಶ್ರಯ ಮನೆ, ಪಿಂಚಣಿ ಮುಂತಾದವುಗಳು ಮದುವೆ ಆಗುವದರಿಂದ ರದ್ದಾಗುತ್ತವೆ. ಇದರಿಂದ ಅವಳ ಸ್ಥಿತಿ ಇನ್ನಷ್ಟು ಶೋಚನೀಯವಾಗುತ್ತದೆ.

ಇದರಿಂದ ವಿಮೋಚನಾ ಸ್ವಯಂ ಸೇವಾ ಸೇವಾ ಸಂಸ್ಥೆ (ಬೆಳಗಾವಿ - ಅಥಣಿ)ಯು ಇಂತಹ ಮದುವೆಗಳನ್ನು ಪ್ರೋತ್ಸಾಹಿಸುವದನ್ನು ನಿಲ್ಲಿಸಿದೆ.[18] ಆದರೆ ಇದರ ಬದಲು ತಮ್ಮ ಹೆಣ್ಣು ಮಕ್ಕಳನ್ನು ಅರ್ಪಣೆ ಮಾಡದೇ ಗೌರವಯುತವಾದ ಮದುವೆ ಮಾಡಿಕೊಡಲು ಉತ್ತೇಜಿಸುತ್ತಿದೆ. ಆದಾಗ್ಯೂ ಕೂಡ ಒಳ್ಳೆಯ ರೀತಿಯಲ್ಲಿ ಮದುವೆ ಮಾಡಿಕೊಟ್ಟ ಕೆಲವು ಪ್ರಕರಣಗಳಲ್ಲಿ ಗಂಡಿನ ಮನೆಯವರ ದುಷ್ಟ ಆಲೋಚನೆ ಮತ್ತು ಸ್ವಾರ್ಥಕ್ಕಾಗಿ ಮದುವೆಯಾದ ಹೆಣ್ಣುಗಳನ್ನು ವೇಶ್ಯಾ ವೃತ್ತಿಗಿಳಿಸಿ ದುರುಪಯೋಗ ಮಾಡಿಕೊಂಡ ಉದಾಹರಣೆಗಳನ್ನು ಇವೆ. ಆದ್ದರಿಂದ ಇಂತಹ ಅಲ್ಪವಯಸ್ಸಿನ ಮದುವೆಗಳನ್ನು ಕನಿಷ್ಠ 10ನೇ ತರಗತಿ ಪಾಸು ಮಾಡುವ ವರೆಗೆ ಇಲ್ಲವೆ ವಿವಾಹ ವಯಸ್ಸು 18 ತಲುಪುವ ವರೆಗೆ ಮುಂದೂಡಿ ಜೀವನಕ್ಕೆ ಅಣಿಗೊಳಿಸುವದು ಉತ್ತಮ ವ್ಯವಸ್ಥೆ ಆಗಿದೆ. ಅಥಣಿ (ಕರ್ನಾಟಕ)ಯಲ್ಲಿ ದಲಿತ ಹೆಣ್ಣು ಮಕ್ಕಳು ತಮ್ಮ ತಾಯಿಯರಂತೆ ಲೈಂಗಿಕ ಮಾರುಕಟ್ಟೆಗಳಿಗೆ ಹೋಗುವದನ್ನು ಈ ಸುಧಾರಣಾ ಕ್ರಮಗಳಿಂದ ಮುರಿಯಲಾಗಿದೆ.

ಲೈಂಗಿಕ ಸಂಬಂಧಗಲು ಮತ್ತು ಸಹಜೀವನ :

ದೇವದಾಸಿಗೆ ಯಾವುದೇ ಸಂಗಾತಿಯೊಡನೆ ಜೀವನ ನಿರ್ವಹಿಸಲು ಔಪಚಾರಿಕ ಬಂಧನ ವಿಲ್ಲದೇ ಇದ್ದರೂ ಸಹ ಅವಳು ಪ್ರತ್ಯಕ್ಷದಲ್ಲಿ ತಾತ್ಪೂರ್ತಿಕವೋ ಅಥವಾ ಒಬ್ಬನ ಉಪಪತ್ನಿ ಇಟ್ಟುಕೊಂಡವಳಾಗಿ ಇರಲಪ ಇಷ್ಟಪಡುತ್ತಾಳೆ. ಈ ವ್ಯಕ್ತಿ ಅವಳ ಕನ್ಯತ್ವವನ್ನು ಹರಿದವನಾಗಿರಬಹುದು ಅಥವಾ ಅವಳಿಂದ ಆತನು ಆಕರ್ಷಿತನಾಗಿಯೋ ಅವಧಿ ಸಂರಕ್ಷಕನಾಗಿ ಸಾಕಷ್ಟು ಹಣವನ್ನು ಕೊಟ್ಟು ಮೊದಲೇ ವಿವಾಹಿತನೂ ಆಗಿರಬಹುದು. ಇನ್ನು ಕೆಲ ಪ್ರಕರಣಗಳಲ್ಲಿ ಮೊದಲಿನ ವಿವಾಹದಿಂದ ಭ್ರಮ ವಿರಸಗೊಂಡ ವ್ಯಕ್ತಿ ಆಗಿರಬಹುದು. ಇನ್ನು ಕೆಲವು ದೇವದಾಸಿಯರು ತಮ್ಮ ಮನಸ್ಸು ಇಚ್ಛೆ ಸಂಗಾತಿಗಳನ್ನು ಬದಲಿಸುತ್ತಿರುತ್ತಾರೆ. ಹಾಗೂ ಕೊನೆಗೆ ಬಿಟ್ಟ ವ್ಯಕ್ತಿಯನ್ನು ಅವರು ತಮ್ಮ ಸಂಗಾತಿ ಅಥವಾ ಗಂಡನೆಂದು ಗೌರವಿಸುತ್ತಿರುತ್ತಾರೆ. ಆದರೆ ಆ ಗಂಡು ವ್ಯಕ್ತಿ ಅವಳನ್ನು ಇಟ್ಟುಕೊಂಡವನೆಂದಾಗಲಿ ಅವನಿಂದ ಹುಟ್ಟಿದ ಮಕ್ಕಳಿಗೆ ಜವಾಬ್ದಾರನಾಗಲಿ ಇರುವದಿಲ್ಲ. ಇಂತಹ ಸ್ಥಿತಿಯಲ್ಲಿ ಅವಳು ಆತನಿಂದ ಜೀವನ ನಿರ್ವಹಣೆಗಾಗಿ ಏನಾದರೂ ಹಣವನ್ನು ಪಡೆದುಕೊಂಡುದಾದರೆ ಅದು ಅವಳ ಸುದೈವವೇ ಸರಿ.

### ಆಂಧ್ರಪ್ರದೇಶದ ಜೋಗಿನಿ / ಮಾತಮ್ಮಗಳ ಲೈಂಗಿಕ ಸಂಬಂಧಗಳ ಪ್ರಕಾರಗಳು

| | ಪ್ರಕಾರಗಳು | ಜೋಗಿನಿ / ಮಾತಮ್ಮಗಳ ಸಂಖ್ಯೆ |
|---|---|---|
| 1. | 15 ವರ್ಷಗಳ ಕೆಳಗಿನವರು | 24 |
| | 15 ವರ್ಷಗಳ ಮೇಲ್ಪಟ್ಟವರು | |
| 2. | ಲೈಂಗಿಕ ಸಂಬಂಧ ಇರಲಾರದವರು | 17 |
| 3. | ಓರ್ವ ಸಂಗಾತಿಯೊಡನೆ ಸಂಬಂಧ | 14 |
| 4. | ಇಬ್ಬರು ಸಂಗಾತಿಗಳೊಡನೆ ಸಂಬಂಧ | 14 |
| 5. | ಬಹು ಸಂಗಾತಿಗಳೊಡನೆ ಸಂಬಂಧ | 22 |
| 6. | ಲೈಂಗಿಕ ವೃತ್ತಿಗಿಳಿದವರು | 09 |
| | ಒಟ್ಟು | **102** |

ಮೂಲ : ಶ್ರವಂತಿ ವರದಿ ಡಿಸೆಂಬರ 2006 ಆಂಟಿ ಸ್ಲೇವರಿ ಇಂಟರನ್ಯಾಶನಲ್ ಸಂಸ್ಥೆಗಾಗಿ

**ಕರ್ನಾಟಕದ ಬೆಳಗಾವಿಯ ದೇವದಾಸಿಯರ ಲೈಂಗಿಕ ಸಂಬಂಧಗಳ ಪ್ರಕಾರಗಳು**

| | | |
|---|---|---|
| 1. | ಓರ್ವ ಸಂಗಾತಿಯೊಡನೆ ಸಂಬಂಧ | 46 |
| 2. | 1-3 ಜನ ಸಂಗಾತಿಗಳೊಡನೆ ಸಂಬಂಧ | 209 |
| 3. | 4 ಜನಕ್ಕಿಂತ ಹೆಚ್ಚು ಸಂಗಾತಿಗಳೊಡನೆ ಸಂಬಂಧ | 175 |
| | ಒಟ್ಟು | **430** |

**ವೈವಾಹಿಕ ಸ್ಥಾನಮಾನ**

| | | |
|---|---|---|
| 1. | ವಿವಾಹಿತಳೆಂದು ಕರೆದುಕೊಳ್ಳುವ ದೇವದಾಸಿಯರು | 285 |
| 2. | ಸಂಗಾತಿ ಇದ್ದಾನೆಂದು ಕರೆದುಕೊಳ್ಳುವ ದೇವದಾಸಿಯರು | 125 |

| | | |
|---|---|---|
| 3. | ವಿವಾಹಿತಳಾಗಿದ್ದು ಸಂಗಾತಿಯಿಂದ ವಿಚ್ಛೇದಿತರಾದ ದೇವದಾಸಿಯರು | 000 |
| 4. | ವೈವಾಹಿಕ ಸ್ಥಾನಮಾನದ ಬಗ್ಗೆ ಹೇಳಲು ನಿರಾಕರಿಸಿದ ದೇವದಾಸಿಯರು | 20 |
| | **ಒಟ್ಟು** | **430** |

ಮೂಲ ಕಿಡ್ಸ್ ವರದಿ ಪಿ. ನಂಬರ 2006 ಆಂಟಿಸಿಲಿವರಿ ಇಂಟ್‌ರನ್ಯಾಶನಲ್ ಸಂಸ್ಥೆ ವರದಿಗಾಗಿ

ತಾತ್ವಿಕವಾಗಿ ದೇವದಾಸಿ ಪದ್ಧತಿಯು ಸ್ಥಿತಿವಂತರ ಅಥವಾ ಗ್ರಾಮ ಮುಖಂಡರ ಉನ್ನತ ಜಾತಿಗಳ ಪ್ರಬಲ ಬೇಡಿಕೆಯಿಂದಾಗಲೇ ವಂಶಪಾರಂಪರ್ಯವಾಗಿ ಬೆಳೆದು ಬಂದಿರುವದು ಆದರೆ ವಾಸ್ತವವಾಗಿ ಜೋಗಿನಿ ಮತ್ತು ಮಾತಮ್ಮಗಳನ್ನು ಉಪಭೋಗಿಸುವವರಲ್ಲಿ ಅವರ ಜ್ಯಾತಿ ಅಥವಾ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿರುವುದು ಸಮೀಕ್ಷೆಯಿಂದ ತಿಳಿದು ಬರುತ್ತದೆ.

| ಅ.ಸಂ. | ಗ್ರಾಹಕರ ಜ್ಯಾತಿಗಳು | ಸಂಖ್ಯೆ |
|---|---|---|
| 1 | ಮಾಲಾ ಪ. ಜ್ಯಾ | 47 |
| 2 | ಮಾದಿಗಾ '' | 45 |
| 3 | ರೆಡ್ಡಿ ಇತರ ಜ್ಯಾತಿ | 05 |
| 4 | ಅಗಸರು ಹಿಂದುಳಿದ ಜ್ಯಾತಿ | 02 |
| 5 | ಬಲಿಜಾ ಹಿಂದುಳಿದ ಜ್ಯಾತಿ | 03 |
| 6 | ಯಾವದ '' '' | 02 |
| 7 | ರಾಜು ಇತರ ಜ್ಯಾತಿ | 01 |
| 8 | ಗಿರಿಜನ ಪ. ಪಂ. | 01 |
| 9 | ಕಮ್ಮ ಇತರ ಜ್ಯಾತಿ | 02 |
| 10 | ಮೊದಲಿಯಾರ '' '' | 01 |
| 11 | ವಡ್ಡಿ ಪ. ಜ್ಯಾ | 01 |

ಸ್ವರ್ಗ ಸ್ಥಳ :

ದೇವದಾಸಿ / ಜೋಗಿನಿ / ಮಾತಮ್ಮ ಅವರುಗಳಿಗೆ ಅಧಿಕೃತ ಗಂಡನಾಗಲಿ, ಕುಟುಂಬ ಜೀವನವಾಗಲಿ ಇರದೇ ಇರುವದರಿಂದ ಇವು ಅವಳಿಗೆ ಸುರಕ್ಷಿತ ಸ್ಥಾನವನ್ನು ಜೀವನ ಪರ್ಯಂತವಾಗಿ ನೀಡಲು ಹೆಚ್ಚಿನ ತೊಂದರೆಗಳಾಗಿವೆ. ಅವಳು ಇಟ್ಟುಕೊಂಡತ ನೀಡಿದ ಒಂದು ಸಾಮಾನ್ಯ ಕೋಣೆಯಲ್ಲಿ ಯಾವುದೇ ಹೆಚ್ಚಿನ ಸೌಲಭ್ಯಗಳಿಲ್ಲದೆ ಬಿದ್ದುಕೊಂಡಿರಬೇಕು ಇಲ್ಲವೆ ತನ್ನ ಪೂರ್ವಾಶ್ರಯ ಮನೆಯಲ್ಲಿರಬೇಕು. ಹಿಂದೆ ಏನೇ ವ್ಯವಸ್ಥೆ ಇದ್ದಿರಲಿ, ಆದರೆ ಇಂದು ಯಾವುದೇ ದೇವದಾಸಿ ಗ್ರಾಮದ ದೇವಸ್ಥಾನದ ಪಾಳಿಯಲ್ಲಿ ವಾಸ ಮಾಡುವದಿಲ್ಲ, ಆದರೆ ಇದಕ್ಕೆ ಅಪವಾದವೆಂಬಂತೆ ಸವದತ್ತಿ ಎಲ್ಲಮ್ಮ ದೇವಸ್ಥಾನದಲ್ಲಿ ಸಾಕಷ್ಟು ದೇವದಾಸಿಯರು ವಾಸ ಮಾಡುತ್ತಿರುವದು ಕಂಡು ಬರುತ್ತದೆ.

ಆಂಧ್ರಪ್ರದೇಶದ ಮೆಹಬೂಬನಗರ ಜಿಲ್ಲೆಯಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ಶೇಕಡಾ 45 ರಷ್ಟು ಜೋಗಿನಿ / ಮಾತಮ್ಮಗಳು ತಮ್ಮ ತಮ್ಮ ತಾಯಿ ಮನೆಗಳಲ್ಲಿ ವಾಸ ಮಾಡುತ್ತಿದ್ದರೆ, ಶೇಕಡಾ 50 ರಷ್ಟು ತಮ್ಮ ಸಂಗಾತಿಗಳೊಡನೆ ವಾಸ ಮಾಡುತ್ತಿದ್ದಾರೆ ಹಾಗೂ ಕೇವಲ ಶೇಕಡಾ 5 ರಷ್ಟು ಜೋಗಿನಿ / ಮಾತಮ್ಮಗಲು ಸ್ವತಂತ್ರವಾಗಿ ವಾಸವಾಗಿದ್ದಾರೆ. ಅವರು ಸಾಮಾನ್ಯ ರೀತಿಯಲ್ಲಿ ಮದುವೆ ಆಗುವದು ಸಾಧ್ಯವಿಲ್ಲ ವೆಂದರೆ ಅವರ ವಾಸದ ವ್ಯವಸ್ಥೆ ಸುರಕ್ಷಿತವಿಲ್ಲ ಎಂದೇ ಅರ್ಥೈಸಬೇಕಾಗುತ್ತದೆ. ಆಂಧ್ರಪ್ರದೇಶದಲ್ಲಿನ ಜೋಗಿನಿ / ಮಾತಮ್ಮಗಳ ಬಹುತೇಕ ಮನೆಗಳು ಕಲ್ಲು-ಮಣ್ಣುಗಳಿಂದ ನಿರ್ಮಿತವಾಗಿದ್ದು ಯಾವುದೇ ನಾಗರಿಕ ಸೌಲಭ್ಯಗಳಿಂದ ವಂಚಿತವಾದವುಗಳೇ ಆಗಿವೆ.

ಆದ್ದರಿಂದ ವಾಸದ ಮನೆಗಳದೊಂದು ಜೋಗಿನಿ / ದೇವದಾಸಿ / ಮಾತಮ್ಮಗಳಿಗೆ ಒಂದು ದೊಡ್ಡ ಸಮಸ್ಯೆಯೇ ಆಗಿದೆ. ಪುನರ್ವಸತಿ ಕಾರ್ಯಕ್ರಮದಡಿಯಲ್ಲಿ ಕೆಲವರು ಮಹಿಳೆಯರಿಗೆ ವಾಸದ ಮನೆಗಳನ್ನು ಒದಗಿಸಲಾಗಿದ್ದರೂ ಹೆಚ್ಚಿನ ಬೇಡಿಕೆ ಇರುವದರಿಂದ ಬಹಳಷ್ಟು ಮಹಿಳೆಯರು ಇಂತಹ ಸೌಲಭ್ಯಗಳಿಂದ ವಂಚಿತರಾಗಿಯೇ ಇದ್ದಾರೆ. ಕರ್ನಾಟಕದ ಬೆಳಗಾವಿಯ ಸಮೀಕ್ಷೆ ತಿಳಿಸುವದೇನೆಂದರೆ ಶೇಕಡಾ 62 ರಷ್ಟು ದೇವದಾಸಿ ಮಹಿಳೆಯರಿಗೆ ವಾಸದ ಮನೆಗಳನ್ನು ಒದಗಿಸಲಾಗಿದ್ದು, ಇದು ಆಂಧ್ರಪ್ರದೇಶಕ್ಕಿಂತ ಹೆಚ್ಚಿನ ಪ್ರಮಾಣದ ಸೌಕರ್ಯವಾಗಿದೆ.

ಎಲ್ಲಿ ವಾಸದ ಮನೆಗಳನ್ನು ನೀಡಲಾಗಿದೆಯೋ ಅಲ್ಲಿ ಅದರ ಮಾಲೀಕತ್ವವನ್ನು ಮಹಿಳೆಯರಿಗೆ ನೀಡುವುದು ದುಸ್ತರವಾಗಿದೆ. ಅವುಗಳನ್ನು ಪುರುಷ ಸದಸ್ಯರ ಹೆಸರಿಗೆ ನೀಡಿದರೆ ಅದು ಪುನಃ ಒಂದು ಸಮಸ್ಯೆಯೇ ಇದಲ್ಲದೆ ಇಂತಹ ಮನೆಗಳ ರಿಪೇರಿ ವಗೈರೆ ಕಾಲಾಂತರದಲ್ಲಿ ಮಾಡಬೇಕಾಗಿ ಬರುವದು, ಅದಿಲ್ಲದೆ ಹೋದಲ್ಲಿ ಅವುಗಳ ಸ್ಥಿತಿ ಕೆಡುತ್ತಲೇ ಹೋಗುವುದು ಇನ್ನೊಂದು ದೊಡ್ಡ ಸಮಸ್ಯೆ ಎಂದರೆ, ಆಂಧ್ರಪ್ರದೇಶದಲ್ಲಿ ಅನುಭವಕ್ಕೆ ಬಂದಂತೆ, ಒಂದೇ ಕಡೆ ಕಾಲನಿಗಳಂತೆ ಮನೆಗಳನ್ನು ನಿರ್ಮಿಸಿ ಕೊಟ್ಟರೆ ಇದಕ್ಕೆ ಕೆಂಪು ದೀಪದ ಪ್ರದೇಶವೆಂದು ಕರೆಯುವ ಹೆದರಿಕೆ ಗಾಢವಾಗುತ್ತದೆ. ಇದರಿಂದ ಇಲ್ಲಿ ವಾಸ ಮಾಡುವವರು ಎಲ್ಲ ರೀತಿಯ ಶೋಷಣೆ ದೌರ್ಜನ್ಯಕ್ಕೆ ಒಳಪಡುವ ಭೀತಿ ನಿರಂತರವಾಗಿರುತ್ತದೆ, ಇದು ಸಾಮಾನ್ಯವಾಗಿ ಪೋಲೀಸರು / ಅಧಿಕಾರಿಗಳು ವ್ಯತಿರಿಕ್ತವಾಗಿ ವರ್ತಿಸುವಂತಲ್ಲಿ ಕಠಿಣವಾಗುತ್ತದೆ.

ಇದುವೇ ದೇವದಾಸಿ / ಜೋಗಿನಿ / ಮಾತಮ್ಮಗಳ ಸೊಗಸ್ಥಳ

<u>ಬದುಕಿನ ಪರ್ಯಾಯಗಳು :</u>

ದೇವದಾಸಿ / ಜೋಗಿನಿ / ಮಾತಮ್ಮ ಆಗುವದೆಂದರೆ ತಮ್ಮ ಜೀವನ ನಿರ್ವಹಣೆಗಾಗಿಲೈಂಗಿಕ ಮಾರುಕಟ್ಟೆಗೆ ಅಥವಾ ವೃತ್ತಿಗೆ ಇಳಿಯುವದಿಂದಲ್ಲವೆಂದದಾರೂ ಈ ವ್ಯವಸ್ಥೆಗೇನೂ ಕಲಾಗಿರುವದು ಸಾಮಾನ್ಯವಾಗಿದೆ. ಆಧುನಿಕ ಅರ್ಥಶಾಸ್ತ್ರದಿಂದಲೇ ಈ ವ್ಯವಸ್ಥೆಯನ್ನು ಹೊರಗಿಡಲಾಗಿದೆ. ಮೊದಲಿನ ಕಾಲದಲ್ಲಿ ದೇವದಾಸಿ / ಜೋಗಿನಿ / ಮಾತಮ್ಮಗಳು ಅಂದರೆ ದೇವತೆಗೆ ಅರ್ಪಣೆಯಾದವರು, ಸ್ಥಳೀಯ ಜನರಿಂದ ಧಾರ್ಮಿಕ ಸಮಾರಂಭಗಳಿಗೆ ಜಾತ್ರೆ ಉತ್ಸವ ಪೂಜೆಗಳಿಗೆ ಆಮಂತ್ರಿಸಿದಲ್ಲಿ ಕಾಣಿಕೆ, ಆಹಾರ ಮತ್ತು ಬಟ್ಟೆಗಳನ್ನು ಆಶೀರ್ವಾದ ನೀಡಿ ಪಡೆಯುತ್ತಿದ್ದರು. ಆದರೆ ಇಂದು ಇದು ನಡೆಯುವದೇ ಕ್ವಚಿತ್ತಾಗಿದೆ. ಅಥವಾ ಇದು ಅತೀ ಕನಿಷ್ಟ ಆದಾಯವನ್ನು ಕೊಡುವದರಿಂದ ಇದರಿಂದ ಅವರ ಜೀವನ ನಿರ್ವಹಣೆ ಆಗುತ್ತಿಲ್ಲವಾಗಿ ಈ ಮಾರ್ಗದಿಂದ ಅವರು ದೂರವಾಗಿದ್ದಾರೆ.

ಇಂದು ದೇವದಾಸಿಯರು ಅಲ್ಲದೆ ಇನ್ನು ಅರ್ಪಣೆಯಾಗಿದಿರುವವರನ್ನೊಳಗೊಂಡು ಎಲ್ಲರೂ ಹಣಗಳಿಸಲಿಕ್ಕೆ ಕೆಲಸ ಮಾಡಬೇಕಿರುವದು ಅನಿವಾರ್ಯವಾಗಿದೆ. ಅವರು ಪ. ಜ್ಯಾತಿ / ಪ. ಪಂ. ಗಳಿಗೆ ಸೇರಿದವರಾಗಿರುವದರಿಂದ ಹಾಗೂ ಕನಿಷ್ಟ ಅಥವಾ ಶಿಕ್ಷಣ ಪಡೆಯದೇ ಇರುವದರಿಂದ (ಬೆಳಗಾವಿ ಜಿಲ್ಲೆಯ ದೇವದಾಸಿಯರ ಸಾಕ್ಷರತೆಯ ಪ್ರಮಾಣ ಕೇವಲ ಶೇಕಡಾ 24 ಔಪಚಾರಿಕ ಶಿಕ್ಷಣ) ಅವಕಾಶಗಳು ಅತೀ ಸೀಮಿತವಾಗಿವೆ. ಆದುದರಿಂದಲೇ ಬೆಳಗಾವಿಯಯ ಬಹಳಷ್ಟು ದೇವದಾಸಿಯರು ಕೆಲವು ಕಾಲ ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಇತ್ತೀಚಿಗೆ ಬೆಳಗಾವಿಯ ಪ್ರದೇಶವು ಅಲ್ಲಿನ ನದಿಗಳಿಗೆ ಆಣೆಕಟ್ಟುಗಳನ್ನು ಕಟ್ಟುವ ಮೂಲಕ ಕೃಷಿ ಕ್ಷೇತ್ರದಲ್ಲಿ ಸುಧಾರಣೆ ಆಗಿರುವದರಿಂದ ಕೆಲಸದ ಅವಕಾಶಗಳನ್ನು ಹೆಚ್ಚಿರುವದರಿಂದ ಗ್ರಾಮೀಣ ಪ್ರದೇಶದಲ್ಲಿ ಆದಾಯದ ಮಟ್ಟವನ್ನು ಹೆಚ್ಚಿಸಿದೆ. ಇದು ದಲಿತ ಹೆಣ್ಣು ಮಕ್ಕಳ ಶೋಷಣೆಯನ್ನು ಕಡಿಮೆಗೊಳಿಸಿದೆ ಎಂದು ಹೇಳುವಲ್ಲಿ ಭಿನ್ನಾಭಿಪ್ರಾಯಗಳಿವೆ. ಇದರಿಂದ ಸ್ಥಳೀಯ ಸಂಪತ್ತಿನಲ್ಲಿ ಹೆಚ್ಚಳವಾಗಿ ಉಪಭೋಗದ ಬಗೆಗಳಲ್ಲಿ - ಮದ್ಯ, ಔಷಧಿ ಮತ್ತು ಲೈಂಗಿಕ ಸೇವೆಗಳಲ್ಲಿ ಬೇಡಿಕೆಗಳನ್ನು ವರ್ಧಿಸಿದೆ.

ಎರಡೂ ರಾಜ್ಯಗಳಲ್ಲಿನ ಬಹುತೇಕ ದೇವದಾಸಿಯರು ತಮ್ಮಷ್ಟಕ್ಕೆ ತಾವೇ ಕೂಲಿಗಳೆಂದು ಕೃಷಿ ಅಥವಾ ಕಟ್ಟಡ ಕಾಮಗಾರಿ ಕ್ಷೇತ್ರದಲ್ಲಿನ ಪರಿಣಿತರಲ್ಲದ ಕೂಲಿಕೆಲಸಗಾರರೆಂದು ಕರೆದು ಕೊಳ್ಳುತ್ತಾರೆ. ಅವರಿಗೆ ದಿನಕ್ಕೆ ಅತ್ಯಂತ ಕನಿಷ್ಟ ಕೂಲಿ ಅಂದರೆ ರೂ. 20 ರಿಂದ 25 ವರೆಗೆ ಮಾತ್ರ ಕೂಲಿ ನೀಡಲಾಗುತ್ತದೆ. ಮೆಹಬೂಬ ನಗರವು ಆಂಧ್ರಪ್ರದೇಶದ ಅತ್ಯಂತ ಹಿಂದುಳಿದ ಜಿಲ್ಲೆ ಆಗಿದ್ದು ಕಡು ಬಡತನ ಮತ್ತು ಬರಗಾಲಗಳಿಂದ ಬಳಲುತ್ತಿದೆ. ಆದುದರಿಂದ ಇಲ್ಲಿನ ತರುಣಿಯರು ಮತ್ತು ಮಹಿಳೆಯರು ಕಾಲಮಾನದ ಒಪ್ಪಂದ ಮಾಡಿಕೊಂಡು ವರ್ಷದಲ್ಲಿ ಸುಮಾರು 9 ತಿಂಗಳ ವರೆಗೆ ಕಟ್ಟಡ ಕಾಮಗಾರಿಗಳಿಗೆ ಮುಂಬಯಿ, ವಿಶಾಖಾಪಟ್ಟಣ, ಹೈದ್ರಾಬಾದ ಮುಂತಾದ ನಗರ ಪ್ರದೇಶಗಳಿಗೆ ಕೆಲಸಕ್ಕೆ ಹೋಗುವದು ಸಾಮಾನ್ಯವಾಗಿದೆ. ಈ ರೀತಿಯಲ್ಲಿ ಸಮೀಕ್ಷಿತ ಮಹಿಳೆಯರಲ್ಲಿ ಶೇಕಡಾ 80 ರಷ್ಟು ಮಹಿಳೆಯರು ಬೇಕಾದಷ್ಟು ಸಲ ಹೋಗಿ ಬಂದವರಾಗಿದ್ದಾರೆ. ಕೆಲವೊಂದು ಜೋಗಿನಿ ಮಾತಮ್ಮಗಳು ಈ ರೀತಿ ಕೆಲಸಕ್ಕೆ ಹೋಗಿದ್ದಾರೆ. ಬಹಳಷ್ಟು ಸಂಖ್ಯೆಯಲ್ಲಿ ಇವರು ತಮ್ಮ ಸ್ವ ಗ್ರಾಮಗಳಲ್ಲಿಯೇ ಉಳಿದುಕೊಳ್ಳುತ್ತಾರೆ. ಈ ರೀತಿ ಕಾಮಗಾರಿಗಾಗಿ ಹೋದ ಈ ಮಹಿಳೆಯರು ಅಲ್ಲಿನ ಶಿಬಿರಗಳಲ್ಲಿ ಅವರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿ ಗರ್ಭಿಣಿಯರಾಗಿಯೇ ಎಚ್.ಆಯ್.ವ್ಹಿ. ಸೋಂಕಿತರಾಗಿಯೋ ತಮ್ಮ ಗ್ರಾಮಗಳಿಗೆ ಮರಳಿದ ಬಗ್ಗೆ ವರದಿಗಳು ತಿಳಿಸುತ್ತವೆ. ಅವರು ನಗರ ಪ್ರದೇಶಗಳಿಗೆ ಲೈಂಗಿಕ ವೃತ್ತಿಗಾಗಿ ತೆರಳದೇ ಇದ್ದರೂ ಹೇಗಾದರೂ ತಮ್ಮ ಜೀವನವನ್ನು ನಿರ್ವಹಿಸಬೇಕಿಲ್ಲಾ.

ಇದಕ್ಕೆ ವ್ಯತಿರಿಕ್ತವಾಗಿ, ಬೆಳಗಾವಿಯ ಸಮೀಕ್ಷೆಯು ಹೇಳುವುದೇನೆಂದರೆ ವಲಸೆ ಹೋದವರು ಲೈಂಗಿಕ ವೃತ್ತಿ ಅದರಂತೆ ಬೇರೆ ಉದ್ದೇಶಗಳನ್ನು ಹೊಂದಿದವರಾಗದ್ದಾರೆ. ಸುಮಾರು 18-40 ವಯೋಮಾನದ ಶೇಕಡಾ 65 ರಷ್ಟು ಜನ ಮುಂಬಯಿ-ಗೋವಾ ಮುಂತಾದ ನಗರಗಳಿಗೆ ಆರ್ಥಿಕ ಅವಕಾಶಗಳಿಗಾಗಿಯೇ, ತಮ್ಮ ಜೀವಮಾನದ ಅವಧಿಯಲ್ಲಿ ಒಮ್ಮೆಯಾದರೂ, ಹೋದವರಾಗಿದ್ದಾರೆ. ಇಂತಹ ವಯೋಮಿತಿಯ ಸುಮಾರು 280 ಜನರಲ್ಲಿ 48 ಜನ (ಶೇ. 17 ಮಾತ್ರ) ವಿವಿಧ ವ್ಯಾಪಾರ ವೃತ್ತಿಗಳಲ್ಲಿ ಕೆಲಸಕ್ಕೆ ತೊಡಗಿದ್ದಾರೆ ಉಳಿದವರೆಲ್ಲ ಲೈಂಗಿಕ ವೃತ್ತಿಯಲ್ಲಿ ತೊಡಗಿದವರಾಗಿದ್ದಾರೆ.

ಈ ಕೆಳಗಿನ ಕೋಷ್ಟಕವು ಬೆಳಗಾವಿಯಲ್ಲಿ ದೇವದಾಸಿಯರು ಗಳಿಕೆಗಾಗಿ ಆಯ್ದುಕೊಂಡ ವಿವಿಧ ಬಗೆಗಳನ್ನು ಅಧ್ಯಯನವು ಹೇಳುತ್ತದೆ.

| ಸಂಬಳದ ಕೆಲಸ | ದಿನಗೂಲಿ | ಕೃಷಿ (ಭೂ ಒಡೆಯರು) | ವ್ಯಾಪಾರ | ಒಟ್ಟು |
|---|---|---|---|---|
| 01 | 415 | 03 | 11 | 430 |

ಗೋಕಾಕದಲ್ಲಿ (ಬೆಳಗಾವಿ - ಕರ್ನಾಟಕ) ನಡೆದ ಕಾರ್ಯಾಗಾರದಲ್ಲಿ ಭಾಗವಹಿಸಿದರವರಲ್ಲಿ ಕೆಲವರು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಲ್ಲಿ ಕಾರ್ಯಕರ್ತರಾಗಿ ಕೆಲಸ ಮಾಡುವವರಾಗಿದ್ದು, ಅವರಿಗೆ ಅತ್ಯಂತ ಕಡಿಮೆ ಸ್ಟೈಪೆಂಡ್ ಕೊಡಲಾಗುತ್ತಿದ್ದು ಅದು ಅವರ ಜೀವನ ನಿರ್ವಹಣೆಗೆ ಯಾವುದಕ್ಕೂ ಸಾಕಾಗುವಂತಿರಲಿಲ್ಲ. (ತಿಂಗಳಿಗೆ ರೂ. 600 = 700)

ಆಂಧ್ರಪ್ರದೇಶದ ಮೆಹಬೂಬನಗರದ ಕಾರ್ಯಾಗಾರದಲ್ಲಿ ಭಾಗವಹಿಸಿದವರೆಲ್ಲರು ಬೆಳಗಾವಿ ಕಾರ್ಯಾಗಾರದಲ್ಲಿ ಭಾಗವಹಿಸಿದವರಿಗಿಂತಲೂ ಹೆಚ್ಚಿನ ಬಡವರಾಗಿದ್ದು, ಅವರು ಕೂಲಿಗಳೇ ಆಗಿದ್ದರು. ಅವರು ವರದಿ ಮಾಡಿದ್ದೇನೆಂದರೆ ಅವರಿಗೂ ಬೇರೆಯವರಷ್ಟೇ ಕೂಲಿ ನೀಡುತ್ತಿದ್ದರೂ ಇವರಿಗೆ ಬಹಳೇ ತಾರತಮ್ಯದ ರೀತಿಯಲ್ಲಿ ಹೆಚ್ಚು ಕಷ್ಟ ಸಾಧ್ಯ ಕೆಲಸಗಳನ್ನು ನೀಡುವುದು, ಬೇರೆ ಅವರಿಗಿಂತ ಹೆಚ್ಚು ಅವಧಿಗೆ ಕೆಲಸ ಮಾಡಿಸಿಕೊಳ್ಳುವದು, ಅವಮಾನಕರ ಬೈಗಳನ್ನು ತಿನ್ನುವದು ಮುಂತಾದವುಗಳನ್ನು ಸಹಿಸಿಕೊಳ್ಳಬೇಕಾಗುವದೆಂದು ಕೃಷಿ ಕೂಲಿ ಮಾಡುವವರು ರೈತ ಮಾಲಿಕರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಪಡಬೇಕಾಗುತ್ತಿತ್ತು. ಆದರೆ ಗೋಕಾಕ ಕಾರ್ಯಾಗಾರದಲ್ಲಿ ಭಾಗವಹಿಸಿದವರಾರೂ ಇಂತಹ ದೌರ್ಜನ್ಯಕಾರಿ, ದಬ್ಬಾಳಿಕೆಯನ್ನು ಅನುಭವಿಸಿದವರಾಗಿರಲಿಲ್ಲ.

## ಮಧ್ಯ ಮತ್ತು ವೃದ್ಧಾಪ್ಯ ವಯಸ್ಕರ ಸಮಸ್ಯೆಗಳು :

ದೇವದಾಸಿಯರು / ಜೋಗಿನಿಯರು ಒಂದೊಮ್ಮೆ ಮಕ್ಕಳನ್ನು ಹೆತ್ತರೆ ಅವರು ಇನ್ನಷ್ಟು ಸಮಸ್ಯೆಗಳಿಗೊಳಗಾಗುವರು ಮಕ್ಕಳ ಪಾಲನೆ, ಪೋಷಣೆ ಹಾಗೂ ಬಟ್ಟೆ - ಬರೆಗಳನ್ನು ಒದಗಿಸುವವರು ಇರುವದಿಲ್ಲ. ಅವರು ವೃದ್ಧಾಪ್ಯಕ್ಕೆ ಬಂದರಂತೂ ಇನ್ನೂ ಕಠಿಣವಲ್ಲದೆ ಅವರು 40ಕ್ಕೆ ಅಂದರೆ ಅತ್ಯಂತ ಕಡಿಮೆ ವ್ಯಯಸಿಗೆ ವೃದ್ಧಾಪದಲ್ಲಿ ಕಾಲಡಿರುತ್ತಾರೆ. ಇದರಿಂದ ಅವರಿಗೆ ಕಟ್ಟಿಳ, ಕಾಮಗಾರಿಗಳಂತಹ ಭಾರವಾದ ಕೆಲಸಗಳನ್ನು ನಿಭಾಯಿಸಲಾಗುವದಿಲ್ಲ.[20] ಅವರ ಸ್ಥಾನಮಾನ ಅವರನ್ನು ಭಿಕ್ಷೆಗೆ ಎಳಸುತ್ತದೆಯಾದರೂ ಅದರಿಂದ ಬದುಕಿಗೆ ಸಾಲುವಷ್ಟು ದೊರೆಯುವದಿಲ್ಲ.

ಆರ್ಥಿಕ ಸ್ಥಿತಿ-ಗತಿಗಳ ಕುರಿತು ಇವರಲ್ಲಿ ಜಾಗೃತಿಯನ್ನು ನಿರ್ಮಿಸಿದಾಗ ಸ್ವಯಂ ಸೇವಾ ಸಂಸ್ಥೆ ಹಾಗೂ ಸರಕಾರಗಳ ಕೆಲವೊಂದು ಯೋಜನೆಗಳನ್ನು ಜಾರಿಗೆ ತರುವುದು ಅನಿವಾರ್ಯವಾಯಿತು. ಬೆಳಗಾವಿಯಲ್ಲಿ ದೇವದಾಸಿಯರ ಆಚರಣೆ ಹೆಚ್ಚಿನ ಪ್ರಮಾಣದಲ್ಲಿರುವ ಕಾರಣ ಇಂತಹ ಆರ್ಥಿಕ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಯಿತು.1991 ರಲ್ಲಿ ಕರ್ನಾಟಕದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ದೇವದಾಸಿಯರ ಪುನರ್ವಸತಿ ಕಾರ್ಯವನ್ನು ಅಂದರೆ ಆರ್ಥಿಕ ಯೋಜನೆಗಳನ್ನು ಅನುದಾನ ನೀಡುವ ಮೂಲಕ ಜಾರಿಗೊಳಿಸಲು ವಹಿಸಿ ಕೊಡಲಾಯಿತು. ಅದು (ನಿಗಮವು) ಗ್ರಾಮೀಣ ಅಭಿವೃದ್ಧಿಯಲ್ಲಿ ಕೆಲಸ ಮಾಡಿ ಒಳ್ಳೆಯ ಹೆಸರು ಮಾಡಿದ ಮೈರಾಡಾ ಸಂಸ್ಥೆಯನ್ನು ದೇವದಾಸಿ ಪುನರ್ವಸತಿ ಕಾರ್ಯಕ್ರಮಗಳನ್ನು ರೂಪಿಸಲು ತೊಡಗಿಸಿಕೊಂಡಿತು ಹಾಗೂ ಡಚ್ ಸ್ವಯಂ ಸೇವಾ ಸಂಸ್ಥೆ ನೋವಿಬ್ (NOVIB) ಯು ಹಣಕಾಸಿನ ನೆರವನ್ನು ನೀಡಿತು.

1997 ರಲ್ಲಿ ಮೈರಾಡಾ ಮತ್ತು ಕ.ರಾ.ಮ.ಅ.ನಿ. ಗಳು ಬೆಳಗಾವಿಯ ದೇವದಾಸಿಯರಲ್ಲಿ ವ್ಯಾಪಕ ಜಾಗೃತಿ ಮತ್ತು ಅವರನ್ನು ತಲುಪುವ ಕಾರ್ಯಕ್ರಮದಲ್ಲಿ ನೆರವಾಗುವಂತೆ ದೇವದಾಸಿ ಮಹಿಳೆಯರನ್ನೊಳಗೊಂಡ ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆ (MASS) ಯನ್ನು ಹುಟ್ಟುಹಾಕುವಲ್ಲಿ ಸಫಲರಾದರು. ಈ ಮಾಸ್ ಸಂಸ್ಥೆಯ ಮೂಲಕ ಸ್ವ - ಸಹಾಯ ಸಂಘ ಸಂಸ್ಥೆಗಳನ್ನು ಹುಟ್ಟು ಹಾಕುವಲ್ಲಿ ತನ್ನ ಮೂಲಕ ಅವುಗಳನ್ನು ಸಾಲ ನೀಡುವ ಹಣಕಾಸು ಸಂಸ್ಥೆಗಳಿಗೆ ಜೋಡಿಸುವ ಮೂಲಕ ವ್ಯಾಪಕ ಕ್ರಮವನ್ನೂ ಹಾಗೂ ದೇವದಾಸಿ ಮಹಿಳೆಯರಿಗೆ ವಿವಿಧ ವೃತ್ತಿಗಳಲ್ಲಿ (ಆದಾಯ ಗಳಿಕೆಯ) ಭೀತಿ, ಕೌಶಲ್ಯ ತರಬೇತಿ,